Lahari COMMUNIQUE Its Unique!

Volume : 1
June - 2010
Part 1
Price : Rs. 5

# Change at the top

On 11th May, Chief Justice of India Konakuppakatil Gopinathan Balakrishna retired from the service.

> "I was born and brought up in a tiny village. I was one of the 8 siblings. I suffered all the difficulties that a village boy could have suffered about 60 years back. I must have suffered social prejudices. It is part of our social life - no use grumbling over this."
> *Former CJI K.G. Balakrishnan in his farewell speech*

K.G.Balakrishnan who had enrolled as an Advocate with the Kerala State Bar Council on 16.03.1968, had joined Kerala State Judicial Service as Munsiff Magistrate on 10.10.1973. He had resigned to resume practice and get elevated to the High Court. He was promoted to SC on 08.06.2000.

On 12th May J| Sarosh Homi Kapadia, the senior most judge in the SC assumed the office of the Chief Justice of India.

> "I come from a poor family. I started my career as a class IV employee and the only asset I possess is integrity"
> *J| S.H.Kapadia in a letter to J| Krishna Iyer*

S.H.Kapadia as he then was, entered legal profession on 10.09.1974. He was elevated to Bombay High Court as its additional judge on 08.10.1991. He was promoted to the Supreme Court on 18.02.2003. He is due to retire on 29.09.2012.

# Gender justice to Muslim women

Lok Sabha on May 7th, passed a historic bill to amend Wakfs Act, 1995, that seeks to introduce a far reaching change in the constitution of the Wakf Boards across the country. By this amendment, women, hitherto neglected section of the Islamic society will get representation in the Board.

The Bill seeks to achieve other objects too. A provision has been incorporated in the Bill to streamline functioning of the boards and preventing encroachment on wakf lands. It also aims to expediting the pace of clearing encroachment of the wakf land and other assets by providing penal provisions.

Replying on the debate on the Bill, minister for Minorities Affairs Salman Khurshid said the boards would now "look after women and children better." He said the encroached land will be claimed back or a market rent be fixed. The wakf land will not be allowed to be sold. The wakf tribunal will decide all cases. The unauthorised claim on the wakf board will invite jail for two years or a fine of Rs 15,000, the minister said.

BJP leader Mukhtar Abbas Naqvi has welcomed the step to allow women in the Board.

In the 9th annual general body meeting of Lahari Advocates Forum held on 19.02.2010, the life membership fee is enhanased to Rs.1,000/- from present fee of Rs. 500/-. Members are requested to pay the difference amount & co-operate.

# SC delivers at last

In the background of retirement of CJI, K.G.Balakrishnan on 11th May, a bench of SC consisting of J|Balakrishnan delivered many important judgments including many constitutional bench verdicts during the month of May. The following is gist of those judgments:

### Narco analysis, brain mapping and polygraph test impermissible :

On 6th May, a bench consisting of J| Balakrishnan, J| R.V.Ravindran and J| Dalveer Bhandari disallowed the practice of crime investigating agencies to subject the accused and suspects to Narco anyalysis, brain mappinig and polygraph tests to unearth `truths' against the wish of the subjects.

Delivering judgment in a batch of petitions questioning the legality of the practice of forced test on the suspects and accused, the SC opined that involuntarily subjecting an accused, a suspect or a witness to such techniques violates Article 20 (3) of the Constitution, therefore, such practice violates fundamental right of the citizen. The Court further said subjecting a person to such techniques amounts to intrusion of personal liberty under Article 21 of the Constitution. Forcing an individual to such methods would violate the scheme of legal process, even if a person is subjected to such a mode of investigation on consent, the result of the test cannot be an admissible piece of evidence.

However, the bench made an exception saying that on the consent of the suspect or accused, such a test may be conducted on him and the investigating agency can use them for further probe.

The judgment of the Court makes it mandatory for investigating agencies to to follow strictly the guidelines laid down by the National Human Rights Commission, for conducting voluntary polygraph test.

These batch of petitions were reserved for judgment on January 25, 2008.

The respondent investigating agencies and the Central Government had defended use of modern scientific technology as a means of investigation. They had supported their stand on the force of the opinion expressed by the Law Commission favoring use of technology as a tool of investigation. However, their argument did not find favour with the Court.

### OCB quota in local bodies permissible:

A constitution bench of the SC consisting of the then CJI, K.G.Balakrishnan, Justices R V Raveendran, D K Jain, P Sathasivam and J M Panchal on 11.05.2010 upheld the constitutional validity of reservation for backward classes in elected local self-government bodies, including posts of chairpersons, and rejected the plea that the creamy layer should be excluded.

The apex court was examining the validity of reservation benefit to members of backward classes in local bodies and for the posts of Chairpersons. A batch of petitions were filed challaing the reservation on the ground that amended provisions of Articles 243-D(6) and 243-T(6) are unconstitutional.

The verdict says "the upper ceiling of 50 per cent vertical reservations in favour of SC/ST/OBCs should not be breached in the context of local self-government. Exceptions can only be made in order to safeguard the interests of Scheduled Tribes in the matter of their representation in panchayats located in the Scheduled Areas."

Rejecting the argument that the post of chairpersons being solitary post, any reservation amounts to 100% reservation, the Court observed that the reservation of chairperson posts in the manner contemplated by Articles 243-D(4) and 243-T(4) is constitutionally valid. These

Contd...Page 3

*Fulfillment may fall short of expectations -Benjamine C. Cardozo*

Editor Speaks

# Tasks before the new Chief

Justice Sarosh Homi Kapadia, the senior most judge in SC was sworn in as the 38th Chief Justice of India on May 12, 2010. He has a tenure of 2 and a half years, a reasonably long innings ending on 29.09.2012.

The new Chief has many tasks lined up before him. Ranging from the way to deal with corrupt judges to the methods to achieve transparency in the working of the SC, the incumbent has a host of delicate matters and complicated issues to take a definite stand. The Chief being the head of judicial institution has to lead the institution by adopting firm stand on these issues. The institution looks up at him for guidance.

Soon after Justice K G Balakrishnan took over as the chief justice of Supreme Court, he declared with gusto that "in a democratic set-up, information is empowerment, since it promotes transparency, integrity and accountability. It is necessary to keep the people informed on vital aspects of the functioning of a public institution so as to enlighten them and enable them to form an informed opinion on its working and performance. I am happy that the Supreme Court of India has taken a lead in this direction." But not before the ink of his editorial writing in Supreme Court journal dried, he changed his stand on disclosure of information. The new incumbent will soon be called upon to express his views on transparency in the working of the SC more importantly in appointment and promotion of judges.

Cleansing the judiciary is another important task for the Chief. On the eve of his retirement, J| K.G.Balakrishnan said that corruption in the judiciary is on small scale. But what is significant is his admission that judiciary has been corrupted. The head of the institution should adopt 'zero tolerance' attitude towards corruption and weed out the undesirable elements from the system. The world is watching the new chief on his approach towards the corruption in his institution.

The new CJI has inherited heavy dockets. The pendency in SC as at the end of April 2010 is 55018. The new Chief has to find ways and means to clear them quickly to bring smile on the face of the last man in the queue.

More importantly, the new Chief will be called upon to bring transparency in appointment of judges to High Courts and promotion to Supreme Court.

The whole institution expects the incumbent to leave a legacy by the time he retires in September 2012.

## Random Reflections

On May 11, Chief Justice of India, K.G.Balakrishnan retired as the 35th Chief Justice. This has provided an occasion to look at his score card and evaluate his contribution, if any, to the judiciary as a whole.



K.Suryanarayana Rao
98455 29448

Initially he started harping upon independence of judiciary. Perhaps what he meant was no intervention by the executive rather than independence. The fact that he did not effectively deal with the situation arising out of the reported incident when a Union minister phoned up a judge of the Madras High Court would show that how serious he was in the matter.

After his elevation as the Chief Justice, media started referring him as the first person occupying the coveted post belonging to the Dalit Community. Surprisingly, he took lot of pride in being referred to as such instead of discouraging the media from doing so. In the process he identified himself with the community rather than presenting himself as the Chief Justice of India. When a judge is appointed litigants and lawyers are not concerned as to which religion, caste or creed he belongs to but he remains only a judge in their perception.

He failed in persuading the execute to fill all the vacancies in higher judiciary keeping in mind the pending work in higher judiciary. Instead he made a feeble attempt to get his tenure extended by another three years on the premise that vacancies in higher judiciary could not be filled up for want of availability of talent. It is another thing the ruling dispensation could not muster enough political support to realize his dream.

In his last interview with media Justice Balakrishnan, said that corruption in judiciary is comparatively less. Surprisingly, he did not disclose the number of reported instances involving corruption and action taken by the Apex Court. The inaction in the cases of judges of Punjab and Haryana and Karnataka High Courts indicate that highest judiciary is hardly interested in effectively dealing with corruption instead of allowing the judges to enjoy their privileges without interruption.

His reported observations with regard to live-in-relationship even when the matter involving a film personality was pending before the apex court, to say the least, was unwarranted insensitive. Non disclosure of judges' assets and fighting of Principal Information Commissioner's order before Delhi High Court and later at the Supreme Court itself by artificially splitting the position of the Chief Justice of India and his office gives an impression that he has more to hide than being transparent.

Over all Justice Balakrishnan has not left behind any legacy which can be considered significant or any one can be proud of.

## Bhopal Gas tragedy case verdict after 23 years

The Chief Judicial Magistrate of Bhopal, Mohan P Tiwari heard the arguments in 23 years old Bhopla Gas tragedy case and fixed June 7th for pronouncement of judgment.

The accused who faced the trial are former directors and some of the employees of Union Carbide Corporation, a unit of US based company in India. Warren Anderson, former Chairman, Union Carbide Corporation, USA is absconding in the case. The accused who have been put to trail are facing charges under Sec. 304 (A) (causing death by negligence), 336 (acts endangering life or personal safety of others) and 337 (causing hurt by act endangering life or personal safety of others) of IPC apart from other offences. During the trial, 178 prosecution witnesses were examined and 3,008 documents were exhibited.

On a tragic night in 1984, toxic gas from the plant of the factory on the outskirts of Bhopal had leaked to claim thousands of livers.

## 17th Common Law Conference in India

The 17th Common Law Conference, which is the leading legal event in the group of Commonwealth nations, will be held in India during 5th to 9th February 2011. The event is returning to India after a lapse of almost four decades. The event will be held in Hyderabad at International Convention Centre.

This conference will attract Lawyers, Judges, academicians, legal administrators and others from 53 member-states. Number distinguished keynote speakers will speak on intellectually stimulating and wide range of legal topics in the Conference. There will be four major topics coming up for discussion, Constitutionalism, human rights and the rule of law, corporate and commercial law and importantly, appointment and disciplining the Judges.

The Conference is likely to provide an opportunity for social networking. The organizers have promised to offer rich and exciting social programmes for the benefit of delegates and their spouses.

## *Foreign Panorama*

### Pak forms legal team to fight India

Neighbouring Pakistan has fomed a team of lawyers to fight legal battle against Inida in the International Court of Arbitration. The fight is on India's on going work of Kishanganga hydropower project in the indo Pak boarder.

According to Pak, the work undertaken by India violates Indus Water Treaty entered into by the two nations in the year 1960.

Pak's team of legal experts will be headed by Professor Kaiyan Homi Kaikobad, an international legal expert of Pakistani origin. Kaikobad will be assisted by lawyers and officials of the ministries of water and power, law and foreign affairs, Pakistan's permanent commissioner to the Indus Waters Commission.

The government is estimated to have allocated $10 million for the case.

Kaikobad, who did his PhD from London School of Economics, is a fellow of the Royal Geographical Society. Formerly a legal adviser to the government of Bahrain, he is currently a professor of law and director of research at Brunel University.

India is allegdly constructing tunnel to to divert Kishanganga (Neelum) waters to Wullar Lake in alleged violation of the Indus Waters Treaty and is working to complete the 330MW project by January 2016. If completed, the project will severely affect Pakistan's rights over the river, reduce water flows into Pakistan and minimise the power generation capacity of Pakistan's 969 MW Neelum-Jhelum hydropower project near Muzaffarabad in PoK, it is alleged.

### Book Release

On 16.05.2010 C.Prakash, Advocate released his book, a collection of triplets titled Hita Bindu (ಹಿತ ಬಿಂದು). This is his sixth literary work. The Book was released in a well attended function held in Magadi.

### Permanet Judges to High Court

On 26th May 2010 J| B. Sreenivase Gowda, J| K. N. Keshavanarayana & J| S.N. Satyanarayana were sworn in as permanent judges of the Karnataka High Court.


**LAW & OPTIONS**

**WE HAVE MERGED OUR LEGAL PRACTICES AND MOVED TO**

**LAW & OPTIONS**

(ADVOCATES AND ALTERNATE DISPUTE RESOLUTION PEOPLE)

Associates: India Law Offices, New Delhi

70/3, 1st FLOOR, MILLERS ROAD, BANGALORE-560052

TEL: +91 80 22340001/22340002 FAX: +91 80 22340003

EMAIL : info@lawandoptions.com

Web : www.lawandoptions.com

**SHIVKUMAR**
9845016447
shivkumar@lawandoptions.com

**NANDGOPAL B**
9845083041
nandgopalb@lawandoptions.com

**S. N. PRASHANTH CHANDRA**
9880737800
snpchandra@lawandoptions.com


### SC entertains US man's plea for asylum

On 14th May, the Supreme Court directed the Centre to examine the plea of a formar US naval officer to give political asylum in India to escape prosecution in US. Knaebel, a 72 yrsrs old ex- US navy officer, appeared in person in the Court to make the plea as his representation has not been considered bythe Government of India for a long time. He fears prosecution in US for for his alleged acts of treason and sedition. Knaebel is Vietnam war veteran.

Knaebel claims to be a Gandhian. He had on June 19, 2009, destroyed his passport at Rajghat and condemned the "imperialistic" policies of the US government. Now he fears that the US Government may treat his act of destroying passport as an act of treason and sedition. Therefore, he has sought political asylum in India. He has been in India since 1995 and claims to be spreading the message of Mahatma Gandhi.

### Proposal to increase BIFR benches: Pranab Mukherji

The Finance Minister, Pranab Mukherji said on 4th May that a proposal to increase the number of benches of Board of Indistrial and Financial Recosntruction (BIFR) is under active consideration of the Government.

Minister of state for finance Namo Narain Meena said of the 7,472 cases received by BIFR, 4620 were disposed of and 1,031 cases were pending. 744 companies have been declared sick and winding up recommended in case of 1,229.

### Stock Exchanges are not public offices : Bombay HC

A division bench of theBombay High Court headed by the acting Chief Justice Madan B Lokur stayed the operation of a single judge's order which had on April 15 held that stock exchanges are "quasi governmental" bodies and therefore, should disclose information to the public under the Right to Information Act.

The court passed the order on an appeal filed by National Stock Exchange(NSE) which contended that it cannot be forced to reveal information under the RTI Act as it is a company and the government has no control over it.

### LAHARI

Lahari Advocates Forum is happy to announce that their news letters Lahari Communique and Lahari Samvada have received provisional registration from the Registrar of News Papers in India, New Delhi.

Now Lahari Communique and Lahari Samvada are available to general public too. Hitherto they were available only to the members of the legal fraternity, S.V.Srinivas Moorthy, President, Lahari Advocates Forum has said.

### Obituary

**We regret to inform the sad demise of the following person**

- On 05.05.2010 N.M.Lingaraju, Dist and Sessions Judge (Retd), passed away at Bangalore. He was a former member of Karnataka State Public Services Commission.
- On 07.05.2010 G.V.Shnatharaju, Senior Advocate, passed away at Bangalore.
- On 08.05.2010 V.S.Gunjal, Senior Advocate passed away at Bangalore.
- On 14.05.2010 C.Govindaraju (93), retired Dist and Sessions Judge passed away at Bangalore. He was the Vigilance Commissioner for many years.

**Published by :** S. N. Prashanth Chandra, Lahari Advocates Forum, No. 2980, "Laxmideep", 17th Cross, K.R. Road, BSK II Stage, Bangalore-560 070
**Printed at :** Vee Kay Printers & Publishers, # 396, Ooliga Complex, Sampige Road, Malleshwaram, Bangalore-560 003.
**Editor : Aravind. M. Neglur.** aravindneglur@gmail.com

ಲಹರಿ ಸಂವಾದ

ಸಂಪುಟ – ೧ | ಶ್ರೀ ವಿಕೃತಿ ನಾಮ ಸಂವತ್ಸರ ವೈಶಾಖ – ಆಷಾಢ | ಬೆಲೆ : ರೂ. ೨-೦೦ | ಸಂಚಿಕೆ – ೧

ಒಳಗೇನಿದೆ?

ಪುಟ ೧ : ಉಪ್ಪಿನಕಾಯಿ, ತಿಂಗಳ ಸುದ್ದಿ
ಪುಟ ೨ : ಪ್ರಚಲಿತ, ಓದುಗರ ಓಲೆ, ಬರಹ
ಪುಟ ೩ : ನ್ಯಾಯಾಲಯಗಳ ಅಂಗಳದಿಂದ, ಅಂಕಣ
ಪುಟ ೪ : ಅಂಕಣ

## ಉಪ್ಪಿನಕಾಯಿ

### ದಲಿತ ಮುಖ್ಯ ನ್ಯಾಯಮೂರ್ತಿಯ ರಕ್ಷಣೆಗೆ ರಾಷ್ಟ್ರೀಯ ಕಮಿಷನ್?

ಕಳಂಕಿತ ಮುಖ್ಯ ನ್ಯಾಯಮೂರ್ತಿ ಪಿ.ಡಿ. ದಿನಕರನ್‌ರನ್ನು ಕರ್ನಾಟಕ ಉಚ್ಚ ನ್ಯಾಯಾಲಯದಿಂದ ವರ್ಗಾವಣೆ ಮಾಡಿರುವ ಕ್ರಮವನ್ನು ಎಸ್‌ಸಿ/ಎಸ್‌ಟಿ ವಕೀಲರ ವೇದಿಕೆ, ಪರಿಶಿಷ್ಟ ಜಾತಿಯ ರಾಷ್ಟ್ರೀಯ ಕಮಿಷನ್ನಿನ ಮುಂದೆ ಒಯ್ದಿರುವುದಾಗಿ ವರದಿಯಾಗಿದೆ.

ಕಮಿಷನ್ನಿನ ಅಧ್ಯಕ್ಷ ಬೂಟಾ ಸಿಂಘ್ ತಮ್ಮ ಮೇ ಮೊದಲ ವಾರದ ಬೆಂಗಳೂರು ಭೇಟಿಯ ಸಂದರ್ಭದಲ್ಲಿ "ಈ ವಿಷಯವನ್ನು ನಾನು ಗಮನಿಸುತ್ತೇನೆ" ಎಂದು ಹೇಳಿದರೆಂದು ವರದಿಯಾಗಿದೆ.

### ಬುರ್ಖಾ ನಿಷೇಧ

ಮೇ ೧೯ರಂದು ಫ್ರಾನ್ಸಿನ ಸಚಿವ ಸಂಪುಟ ಕಾನೂನಾಗಲು ಪ್ರಸ್ತಾವನೆಯೊಂದನ್ನು ಅಂಗೀಕರಿಸಿದ್ದು ಆ ಪ್ರಕಾರ ತಲೆಯಿಂದ ಕಾಲಿನವರೆಗೆ ಧರಿಸುವ ಬುರ್ಖಾಕ್ಕೆ ಇನ್ನು ಮುಂದೆ ಫ್ರಾನ್ಸಿನಲ್ಲಿ ನಿಷೇಧ ಜಾರಿಯಾಗಲಿದೆ.

"ಇಂಥ ಕಾನೂನು ಮಾಡಬೇಡಿ. ನ್ಯಾಯಾಲಯದಲ್ಲಿ ಇದು ನಿಲ್ಲಲಿಕ್ಕಿಲ್ಲ. ವ್ಯಕ್ತಿ ಸ್ವಾತಂತ್ರಕ್ಕೆ ಇಂಥ ಕಾನೂನು ವಿರೋಧವಾಗಿದೆ" ಎಂದು ಒಂದು ವರ್ಗದ ವಾದವಾಗಿದ್ದರೆ ಇನ್ನೊಂದೆಡೆಯಿಂದ 'ಫ್ರಾನ್ಸ್ ತನ್ನದೆ ಆದ ಮೌಲ್ಯಗಳಿರುವ ಪ್ರಾಚೀನ ಯುರೋಪಿಯನ್ ರಾಷ್ಟ್ರ, ಇಂಥ ದಿರಿಸು ನಮ್ಮ ಮೌಲ್ಯಗಳಿಗೆ ವಿರುದ್ಧವಾಗಿದೆ. ಇದನ್ನು ನಿಷೇಧಿಸಲೇ ಬೇಕು,' ಎಂಬ ಬೇಡಿಕೆ ಬಲವಾಗಿ ಕೇಳಿಬಂದಿದೆ.

### ವಕೀಲರಿಂದ ಕಾಶ್ಮೀರ ಕಣಿವೆ ಬಂದ್

'ಜಮ್ಮು ಕಾಶ್ಮೀರ ರಾಜ್ಯದಲ್ಲಿ ಸಂಪೂರ್ಣವಾಗಿ ಕುಸಿದಿರುವ ನ್ಯಾಯಾಂಗ ವ್ಯವಸ್ಥೆ, ಜೇಲುಗಳಲ್ಲಿ ರಾಜಕೀಯ ಕೈದಿಗಳನ್ನು ನಡೆಸಿಕೊಳ್ಳುತ್ತಿರುವ ರೀತಿ ಮತ್ತು ರಾಜ್ಯದ ಅಸ್ಮಿತೆಯನ್ನು ಅಳಿಸಿ ಹಾಕಲು ನಡೆದಿರುವ ಪ್ರಯತ್ನ' ವಿರೋಧಿಸಿ ಜಮ್ಮು ಮತ್ತು ಕಾಶ್ಮೀರ ಉಚ್ಚ ನ್ಯಾಯಾಲಯದ ವಕೀಲರ ಸಂಘ ಬಂದ್‌ಗೆ ಕರೆಕೊಟ್ಟಿತ್ತು. ಮೇ ೧೦ರಂದು ನಡೆದ ಬಂದ್‌ನಿಂದ ಜಮ್ಮು ಪ್ರದೇಶದಲ್ಲಿ ಗಣನೀಯ ಬದಲಾವಣೆ ಕಾಣಲಿಲ್ಲ. ಆದರೆ ಕಾಶ್ಮೀರ ಕಣಿವೆಯಲ್ಲಿ ಸಾಮಾನ್ಯ ಜನಜೀವನ ಸಂಪೂರ್ಣವಾಗಿ ಅಸ್ತವ್ಯಸ್ಥವಾಗಿತೆಂದು ಪಿ ಟಿ ಆಯ್ ವರದಿ ಮಾಡಿದೆ.

## ತಿಂಗಳ ಸುದ್ದಿ

# ಕಾನೂನು ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಪ್ರಧಾನಿ ಕರೆ

ದೇಶದಾದ್ಯಂತ ಕಾನೂನಿನಂತೆ ಆಡಳಿತ (rule of law) ಜಾರಿಯಾಗಲು, ಮತ್ತು ಜನ ಸಾಮಾನ್ಯರಿಗೆ ಕ್ಷಿಪ್ರ ನ್ಯಾಯ ದೊರೆಯಲು ಕಾನೂನಿನ ಶಿಕ್ಷಕರು, ವಕೀಲರು, ನ್ಯಾಯಾಧೀಶರು, ಮತ್ತು ಕಾನೂನಿನ ಆಡಳಿತ ಕ್ಷೇತ್ರದಲ್ಲಿರುವ ಇನ್ನಿತರೆ ಜನರ ಬೌದ್ಧಿಕ ಮಟ್ಟದಲ್ಲಿ ಹೆಚ್ಚಳವಾಗಲು ಪ್ರಧಾನಿ, ಡಾ॥ ಮನ್‌ಮೋಹನ್ ಸಿಂಘ್ ಕರೆ ಕೊಟ್ಟಿದ್ದಾರೆ.

**ಸರ್ವಪಲ್ಲಿ ರಾಧಾಕೃಷ್ಣನ್ ಹೇಳಿದ್ದೇನು?**
"ನಮ್ಮ ಕಾನೂನು ಶಿಕ್ಷಣ ಸಂಸ್ಥೆಗಳಿಗೆ ದೇಶದಲ್ಲೆ ಆಗಲಿ ವಿದೇಶದಲ್ಲೆ ಆಗಲಿ ಹೆಚ್ಚಿನ ಗೌರವವಿಲ್ಲ. ಅಂತೆಯೇ ಕಾನೂನು, ಶಿಕ್ಷಣಾರ್ಥಿಗಳಿಗೆ ಗಂಭೀರ ಅಧ್ಯಯನದ ಅಥವಾ ಆಳವಾದ ಸಂಶೋಧನೆಯ ವಿಷಯವಾಗಿಲ್ಲ."

ಮೇ ೧ರಂದು ನವದೆಹಲಿಯಲ್ಲಿ ನಡೆದ ಕಾನೂನು ಶಿಕ್ಷಣದ ಎರಡನೆ ಹಂತದ ಸುಧಾರಣೆಯ ಬಗೆಗಿನ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತಾಡುತ್ತ ಪ್ರಧಾನಿ ಕಾನೂನಿನ ಕ್ಷೇತ್ರದಲ್ಲಿ ಸಂಶೋಧನೆಗೆ ವಿಫುಲ ಅವಕಾಶಗಳಿದ್ದು ಅದರ ಸದ್ಬಳಕೆ ಆಗಿಲ್ಲವೆಂದರು.

ಇದೆ ಸಂದರ್ಭದಲ್ಲಿ ಪ್ರಧಾನಿ, ಹಿಂದಿನ ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ನರ ನುಡಿಗಳನ್ನು ಉದ್ಗರಿಸಿ, "ಆ ಕಾಲಮಾನದಿಂದ ನಾವು ಸಾಕಷ್ಟು ದೂರ ಸಾಗಿ ಬಂದಿದ್ದೇವೆ ಎಂಬುದೇನೊ ನಿಜ. ಆದರೂ ರಾಧಾಕೃಷ್ಣನ್ ಎತ್ತಿದ ಪ್ರಶ್ನೆಗಳನ್ನು ನಮಗೆ ನಾವೇ ಪ್ರಾಮಾಣಿಕವಾಗಿ ಕೇಳಿಕೊಳ್ಳ ಬೇಕಾದ ಸಂದರ್ಭ ಇನ್ನೂ ಇದೆ" ಎಂದು ನುಡಿದರು.

## 'ಪೊಲೀಸ್ ಗೋಲಿಬಾರ್ ಬೇಕಿತ್ತು' : ವರದಿ

ಕಳೆದ ಮುಂಗಾರಿನ ಸಮಯದಲ್ಲಿ ಹಾವೇರಿಯಲ್ಲಿ ನಡೆದ ಗೊಬ್ಬರಕ್ಕಾಗಿನ ರೈತರ ಗಲಭೆಯ ವೇಳೆ ನಡೆದ ಪೊಲೀಸ್ ಗೋಲಿಬಾರಿನ ಹಿನ್ನೆಲೆಯನ್ನು ತನಿಖೆ ಮಾಡಲು ನೇಮಕಗೊಂಡಿದ್ದ ನ್ಯಾ॥ ಕೆ. ಜಗನ್ನಾಥ ಶೆಟ್ಟಿ ಕಮಿಷನ್ ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿದೆ. ಆಯೋಗದ ವರದಿಯಂತೆ 'ಗಲಭೆ ನಡೆಸಿದವರು ರೈತರಲ್ಲ, ಬದಲಾಗಿ ಬಾಡಿಗೆ ಗುಂಡಾಗಳು. ಪೋಲೀಸರು ಬಲ ಪ್ರಯೋಗವನ್ನು ಆ ಸಂದರ್ಭಕ್ಕೆ ಅಗತ್ಯವಾದಷ್ಟೆ ಪ್ರಮಾಣದಲ್ಲಿ ಪ್ರಯೋಗಿಸಿದ್ದಾರೆ'.

**ಮೇ ಎರಡನೆ ವಾರದಲ್ಲಿ ನ್ಯಾ॥ ಕೆ.ಜಿ. ಬಾಲಕೃಷ್ಣನ್ ನಿವೃತ್ತರಾಗುತ್ತಿದ್ದ ಹಿನ್ನೆಲೆಯಲ್ಲಿ ಕಾಯ್ದಿಟ್ಟಿದ ಹಲವು ಮಹತ್ವ ಪೂರ್ಣ ಮೊಕದ್ದಮೆಗಳಲ್ಲಿ ಸರ್ವೋಚ್ಚ ನ್ಯಾಯಾಲಯ ತೀರ್ಪು ಘೋಷಿಸಿದೆ. ವಿವರಗಳಿಗೆ ನೋಡಿ ಕಮ್ಯುನಿಕ್ – ಸಂ**

# ಕಸಬ್‌ಗೆ ಗಲ್ಲು; ಉಳಿದಿಬ್ಬರಿಗೆ ಬಿಡುಗಡೆಯ ಭಾಗ್ಯ

ಉಗ್ರ ಅಜ್ಮಲ್ ಅಮಿರ್ ಕಸಬ್‌ಗೆ ಗಲ್ಲು ಶಿಕ್ಷೆ ವಿಧಿಸಿ ಮುಂಬೈಯ ವಿಶೇಷ ನ್ಯಾಯಾಲಯ ತೀರ್ಪಿತ್ತಿದೆ.
ನವೆಂಬರ್ ೨೬, ೨೦೦೮ರಂದು ಮುಂಬೈ ಮೇಲೆ ದಾಳಿ ನಡೆಸಿದ ಭಯೋತ್ಪಾದಕ ಕಸಬ್‌ನನ್ನು ಜೀವಂತ ಸೆರೆ ಹಿಡಿಯಲಾಗಿತ್ತು. ಅವನ ಇತರ ೯ ಸಂಗಾತಿ ಭಯೋತ್ಪಾದಕರನ್ನು ದಾಳಿಯ ಸಂದರ್ಭದಲ್ಲಿ ಹತ್ಯೆ ಮಾಡಲಾಗಿತ್ತು.

ಕಸಬ್‌ನ ಮೇಲೆ ಭಾರತ ಸರ್ಕಾರದ ಮೇಲೆ ಯುದ್ಧ ಸಾರಿರುವುದು (ಸೆ. ೧೨೧ ಭಾರತೀಯ ದಂಡ ಸಂಹಿತೆ), ನರಹತ್ಯೆ (೩೦೨ ಭಾ.ದಂ.ಸಂ), ನರಹತ್ಯಾ ಪ್ರಯತ್ನ (೩೦೭ ಭಾ.ದಂ.ಸಂ)ದಂತಹ ಗುರುತರ ಅಪರಾಧಗಳಲ್ಲದೆ ಪಾಸ್‌ಪೋರ್ಟ್‌ನ ಸಹಿ ನಕಲು ಮಾಡಿದಂತಹ ಲಘುತರ ಅಪರಾಧದ ಆಪಾದನೆಗಳನ್ನು ಕಸಬ್ ಮೇಲೆ ಹೊರಿಸಲಾಗಿತ್ತು. ಇವಲ್ಲದೆ ಆರ್ಮ್ಸ್ ಆ್ಯಕ್ಟ್, ಕಾನೂನುಬಾಹಿರ ಚಟುವಟಿಕೆ (ತಡೆಯುವ) ಕಾಯ್ದೆ, ಎಕ್ಸ್‌ಪ್ಲೋಸಿವ್ಸ್ ಆ್ಯಕ್ಟ್, ರೇಲ್ವೆ ಆ್ಯಕ್ಟ್‌ನಡಿಯಲ್ಲಿನ ವಿವಿಧ ಸ್ವರೂಪದ ಅಪರಾಧಗಳ ಆಪಾದನೆಯೂ ಕಸಬ್ ಮೇಲಿದ್ದವು.

ವಿಶೇಷ ನ್ಯಾಯಾಲಯ ತನ್ನ ತೀರ್ಪಿನಲ್ಲಿ ಯುದ್ಧ, ನರ ಹತ್ಯೆ ಮತ್ತು ನರಹತ್ಯೆ ಯತ್ನದ ಅಪರಾಧಗಳು ಕಸಬ್ ಮೇಲೆ ಸಾಬೀತಾಗಿವೆ ಎಂದಿದೆ. ಆದರೆ ಪಾಸ್‌ಪೋರ್ಟ್‌ನ ಮೇಲಿನ ಸಹಿಯ ನಕಲಿನ ಅಪರಾಧದಂತಹ ಲಘುತರ ಅಪರಾಧಗಳು ಸಾಬೀತಾಗಿಲ್ಲವೆಂದಿದೆ.

ದಾಳಿಕೋರರಿಗೆ ಮುಂಬೈಯ ಸೂಕ್ಷ್ಮ ಪ್ರದೇಶಗಳ ನಕ್ಷೆ ತಯಾರಿಸಿ ಕೊಟ್ಟ ಭಾರತೀಯ ಮೂಲದ ಆಪಾದಿತರಾದ ಸಬಾವುದ್ದೀನ್ ಅಹ್ಮದ್ ಮತ್ತು ಫಾಹೀಮ್ ಅನ್ಸಾರಿ ಶಿಕ್ಷೆಯಿಂದ ಪಾರಾಗಿದ್ದಾರೆ. ಅಭಿಯೋಜನೆ ಇದರ ಮೇಲಿನ ಯಾವುದೇ ಆಪಾದನೆಯನ್ನು ಸಾಬೀತುಗೊಳಿಸಲು ವಿಫಲವಾಗಿದೆ ಎಂದಿದೆ ತೀರ್ಪು.

ವಿಶೇಷ ಸೆಷನ್ಸ್ ನ್ಯಾಯಾಲಯದ ಮರಣದಂಡನೆಯ ತೀರ್ಪನ್ನು ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠ ಭಾರತೀಯದಂಡ ಪ್ರಕ್ರಿಯಾ ಸಂಹಿತೆಯ ಸೆ.೩೬೮ರಡಿ ಅಂಗೀಕರಿಸಿದ ನಂತರವೆ ತೀರ್ಪು ಜಾರಿಯಾಗಲು ಸಾಧ್ಯ.

# ನಮಗೆ ದೀರ್ಘಾವಧಿಯ ರಜೆ ಬೇಕೆ?

ಪ್ರಚಲಿತ

ಅರವಿಂದ ಎಂ. ನೆಗಳೂರ
aravindneglur@gmail.com

ಪ್ರತಿ ವರ್ಷದ ಎಪ್ರಿಲ್–ಮೆ ತಿಂಗಳಲ್ಲಿ ೪ ವಾರಗಳ ರಜ, ಅಕ್ಟೋಬರ್‌ನಲ್ಲಿ ಒಂದು ವಾರದ ರಜ ಮತ್ತು ವರ್ಷಾಂತ್ಯಕ್ಕೆ ಎರಡು ವಾರಗಳ ರಜ. ಇವು ಇತರ ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ ಕೇವಲ ನ್ಯಾಯಾಂಗಕ್ಕೆ ಮಾತ್ರ ಕೊಡ ಮಾಡಲ್ಪಟ್ಟಿರುವ ರಜೆಗಳು.

ವರ್ಷಕ್ಕೆ ನ್ಯಾಯಾಂಗ ಪಡೆಯುವ ರಜಾ ಸುಖ–ಸೌಲಭ್ಯದ ಚಿತ್ರಣ ಇದಾದರೆ ಇನ್ನೊಂದೆಡೆ ಇದೆ ವ್ಯವಸ್ಥೆಯ ಇನ್ನೊಂದು ಕರಾಳ ಮುಖವನ್ನು ನೋಡಿ:

ಸರ್ವೋಚ್ಚ ನ್ಯಾಯಾಲಯದಲ್ಲಿ ಎಪ್ರಿಲ್ ೨೦೧೦ರ ಕೊನೆಯಲ್ಲಿ ಬಾಕಿ ಇದ್ದ ಪ್ರಕರಣಗಳ ಸಂಖ್ಯೆ ೫೫೦೧೮. ಎಪ್ರಿಲ್ ತಿಂಗಳ ಮೊದಲ ಭಾಗದಲ್ಲಿ ನ್ಯಾಯಾಲಯದಲ್ಲಿ ಅಡ್ಮಿಷನ್‌ಗೆ ಕಾಯುತ್ತಿದ್ದ ಮೊಕದ್ದಮೆಗಳು ೩೩೩೫೨. ಎಪ್ರಿಲ್ ತಿಂಗಳಲ್ಲಿ ದಾಖಲಾದ ಮೊಕದ್ದಮೆಗಳು ೬೭೦೨. ಅದೆ ತಿಂಗಳಲ್ಲಿ ತೀರ್ಮಾನವಾದ ಮೊಕದ್ದಮೆಗಳು ೬೮೨೨. ಹಾಗಾಗಿ ಸರ್ವೋಚ್ಚ ನ್ಯಾಯಾಲಯ ಮೇ ತಿಂಗಳಿಗೆ ತನಗೆ ತಾನೆ ಕೊಟ್ಟುಕೊಂಡ ಅಡ್ಮಿಷನ್ ಹಂತದ ಕೇಸುಗಳ ಬಳುವಳಿ ೩೩೦೬೪! ಇದು ಅಂತಿಮ ವಿಚಾರಣಾ ಹಂತದಲ್ಲಿರುವ ಕೇಸುಗಳ ಹೊರತಾದ ಚಿತ್ರಣ.

> 'ತೀರ್ಮಾನ'ವೆಂದರೆ Heard. No Merit Dismissed, ಎಂಬಂತಹ ತೀರ್ಮಾನವಲ್ಲ. ಗುಣಮಟ್ಟದ ತೀರ್ಪು ಎಂದರ್ಥ.

ಇನ್ನು ದೇಶದ ೨೧ ಉಚ್ಚ ನ್ಯಾಯಾಲಯಗಳಲ್ಲಿ ೩೧–೧೨–೨೦೦೮ರಂದು ಬಾಕಿ ಇದ್ದ ಎಲ್ಲ ರೀತಿಯ ಪ್ರಕರಣಗಳ ಸಂಖ್ಯೆ ೩೮,೭೪,೦೯೦.

ದೇಶದಾದ್ಯಂತದ ಎಲ್ಲ ಕೆಳ ಹಂತದ ನ್ಯಾಯಾಲಯಗಳಲ್ಲಿ ಇದೆ ಸಮಯಕ್ಕಿದ್ದ ಬಾಕಿ ಪ್ರಕರಣಗಳ ಸಂಖ್ಯೆ ಎರಡು ಕೋಟಿ ಅರವತ್ನಾಲ್ಕು ಲಕ್ಷ ಒಂಬೈನೂರ ಹನ್ನೊಂದು.

ಒಟ್ಟಾರೆ ಚಿತ್ರಣವನ್ನು ನೋಡುವುದಾದರೆ ದೇಶದಾದ್ಯಂತ ೩೧.೧೨.೨೦೦೮ರಂದು ಬಾಕಿ ಇದ್ದ ಪ್ರಕರಣಗಳು ಮೂರು ಕೋಟಿ ಮೂರು ಲಕ್ಷ ಮುವ್ವತ್ತೆಂಟು ಸಾವಿರದ ನೂರ ಹತ್ತೊಂಬತ್ತು!

ಈ ಚಿತ್ರಣ ನೋಡಿದ ನಂತರ ನಮ್ಮ ಅಂತರಾತ್ಮವನ್ನು ಸಾಕ್ಷಿಯಾಗಿಟ್ಟುಕೊಂಡ ನಮಗೆ ನಾವೇ ಕೇಳಿಕೊಳ್ಳೋಣ.

- ನಮಗೆ ಇಂಥ ದೀರ್ಘಾವಧಿಯ ರಜೆ ಬೇಕೆ?
- ಎಲ್ಲ ಪ್ರಕರಣಗಳ ತೀರ್ಮಾನಕ್ಕೆ ಎಷ್ಟು ಕಾಲ ಬೇಕಾಗಬಹುದು?
- ಇಂಥ ರಜದಿಂದ ಈ ವ್ಯವಸ್ಥೆಗೆ ದೀರ್ಘಾವಧಿಯಲ್ಲಿ ಏನಾದರೂ ಲಾಭವಿದೆಯೆ?
- ಇಂಥ ರಜದ ಬಗ್ಗೆ ನ್ಯಾಯ ವ್ಯವಸ್ಥೆಯ ಗ್ರಾಹಕ–ಪಕ್ಷಗಾರನಿಗೆ ಎಂಥ ಅಭಿಪ್ರಾಯವಿರಬಹುದು?

ಭಾರತದ ನ್ಯಾಯಾಂಗಕ್ಕೆ ಈ ದೀರ್ಘಾವಧಿ ರಜದ ವ್ಯಾಧಿ ಬ್ರಿಟಿಷ್ ಆಡಳಿತದ ಕೊಡುಗೆ. ವಿಮಾನಯಾನ ಆರಂಭವಾಗದಿದ್ದ ದಿನಗಳಲ್ಲಿ ಬ್ರಿಟಿಷ್ ನ್ಯಾಯಾಧೀಶರಿಗೆ ತಮ್ಮ ದೇಶಕ್ಕೆ ಹಡಗಿನ ಮೂಲಕ ತೆರಳಿ ಕೆಲ ಕಾಲ ಅಲ್ಲಿದ್ದು ಬರಲು ಎರಡು ತಿಂಗಳ ಬೇಸಿಗೆ ರಜ ಕೊಡುವ ಪರಿಪಾಠ ಆರಂಭವಾಯಿತು. ಬೇಸಿಗೆಯ ಇಂಥ ದೀರ್ಘ ರಜಕ್ಕೆ ಇದ್ದ ಇನ್ನೊಂದು ಕಾರಣವೆಂದರೆ ಅವರಿಗೆ ಇಲ್ಲಿನ ಸಹಿಸಲಾಗದ ಬೇಸಿಗೆ. ಇಲ್ಲೆ ಹುಟ್ಟಿ, ಬೆಳೆದು ತೀರುವ 'ಕಂದು ದೊರೆ'ಗಳಿಗೆ ಬೇಸಿಗೆ ರಜ ಯಾಕೆ ಬೇಕು? ವಿಚಿತ್ರವೆಂದರೆ ಸ್ವಾತಂತ್ರಾನಂತರವೂ ಈ ಪದ್ಧತಿಯನ್ನು ಉಳಿಸಿಕೊಳ್ಳಲಾಯಿತು. ಇನ್ನೂ ವಿಚಿತ್ರವೆಂದರೆ ರಾತ್ರಿ ಕಳೆದು ಬೆಳಗಾಗುವುದರಲ್ಲಿ ದೇಶದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ತಲುಪುವಂತಹ ವಾಯು ಸಾರಿಗೆ ವ್ಯವಸ್ಥೆ ಬಂದ ನಂತರವೂ ಈ ರಜದ ಸೌಲಭ್ಯವನ್ನು ಪೋಷಿಸಿಕೊಂಡು ಬರಲಾಗುತ್ತಿರುವುದು!

ಈ ದೀರ್ಘಾವಧಿ ರಜದ ಅನುಪಯುಕ್ತತೆಯನ್ನು ಮನಗಂಡು ಇದರ ವಿರುದ್ಧ ಹಲವಾರು ಬಾರಿ ದನಿ ಎತ್ತಲಾಗಿದೆ. ತೀರ ಇತ್ತೀಚೆಗೆ ನ್ಯಾ॥ ಎ.ಆರ್. ಲಕ್ಷ್ಮಣನ್ ನೇತೃತ್ವದ ೧೮ ಕಾನೂನು ಕಮಿಷನ್ ತನ್ನ ಆಗಸ್ಟ್ ೨೦೦೯ರ ೨೩೦ನ ವರದಿಯಲ್ಲಿ ಕೆಲಸದ ದಿನಗಳನ್ನು ಹೆಚ್ಚಿಸಲು ಸಲಹೆ ಮಾಡಿದೆ. ಅದಲ್ಲದೆ ಸಂಬಂಧಿಸಿದವರೆಲ್ಲ ಕೆಲಸ ಮಾಡುವ ಸಂಸ್ಕೃತಿಯನ್ನು (work culture) ರೂಢಿಸಿಕೊಳ್ಳಲು ಕರೆ ಕೊಟ್ಟಿದೆ.

ಈ ದೀರ್ಘಾವಧಿ ರಜವನ್ನು ಒಪ್ಪುವ ಇನ್ನೊಂದು ವಾದವೂ ಇದೆಯೆನ್ನಿ. ವಕೀಲರು – ನ್ಯಾಯಾಧೀಶರಿಗೆ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಕಾನೂನಿನ ಗಂಭೀರ ಅಧ್ಯಯನಕ್ಕೆ ಕಾಲಾವಕಾಶ ಸಿಗುವುದಿಲ್ಲ, ಹಾಗಾಗಿ ಇಂಥ ರಜ ಅವಶ್ಯಕ ಎಂಬುದೆ ಆ ವಾದ. ಈ ವಾದದ ಪೊಳ್ಳುತನ ಮೇಲ್ನೋಟಕ್ಕೆ ಕಂಡು ಬರುತ್ತದೆ. ಪ್ರತಿ ರಜದ ನಂತರ ವಕೀಲರ–ನ್ಯಾಯಾಧೀಶರ ಬೌದ್ಧಿಕ ಮಟ್ಟದಲ್ಲಿ ಏನಾದರೂ ಗಣನೀಯ ಹೆಚ್ಚಳ ಕಂಡು ಬರುತ್ತದೆಯೆ?

> "It is high time when all the judges at different levels of judicial hierarchy must devote full time to judicial work and should not be under any misconception that they are Lords or above the Society'
>
> ೧೮ನೆ ಲಾ ಕಮಿಷನ್ನಿನ ವರದಿ.

ಕಾನೂನಿನ ವಿಷಯದಲ್ಲಿ ಡಾಕ್ಟರೇಟ್ ಪಡೆಯಲಿಚ್ಛಿಸುವ ವಕೀಲ. ನ್ಯಾಯಾಧೀಶರಿಗಾಗಿ ಯು.ಜಿ.ಸಿ. ಕೆಲ ನಿಯಮಗಳನ್ನು ಸಡಿಲಿಸಿದೆ. ಇಂಥ ಉತ್ತೇಜಕ ವಾತಾವರಣವಿದ್ದೂ ಕಾನೂನಿನ ಗಂಭೀರ ಅಧ್ಯಯನ ಕೈಗೊಳ್ಳುವ ವಕೀಲ–ನ್ಯಾಯಾಧೀಶರೆಷ್ಟು ಜನ? ಎಲ್ಲೊ ಕೆಲವು ಅಧ್ಯಯನಶೀಲ ವ್ಯಕ್ತಿಗಳಿಗಾಗಿ ಇಡಿ ವ್ಯವಸ್ಥೆಗೆ ರಜೆ ಘೋಷಿಸುವುದು ಏಕೆ? ಇದೆಷ್ಟರ ಮಟ್ಟಿಗೆ ಸರಿ? ●

## ಓದುಗರ ಓಲೆ

ಮಾನ್ಯರೇ,

ಮೇ ಸಂಚಿಕೆಯ 'ಪ್ರಚಲಿತ'ದ ಬಗ್ಗೆ ನನ್ನದೊಂದು ಅಭಿಪ್ರಾಯವಿದೆ. ಜನಗಣತಿಯಲ್ಲಿ ವ್ಯಕ್ತಿಗಳ ಧರ್ಮ, ಲಿಂಗ, ಆದಾಯ, ಆರೋಗ್ಯ, ಶಿಕ್ಷಣ, ಉದ್ಯೋಗ, ವಾಸಸ್ಥಳ ಹೀಗೆ ಹಲವಾರು ವಿವರಗಳನ್ನು ಕಲೆ ಹಾಕುತ್ತಾರೆ. ಇವುಗಳೆಲ್ಲ ಉಪಯುಕ್ತ ಮಾಹಿತಿಗಳೆಂಬುದರಲ್ಲಿ ಸಂದೇಹವಿಲ್ಲ. ಇವುಗಳೊಂದಿಗೆ ಜನರ ಜಾತಿ–ಉಪಜಾತಿ–ಪಂಗಡ– ಒಳ ಪಂಗಡಗಳನ್ನು ದಾಖಲಿಸಿದರೆ ಇನ್ನೊಂದು ಉಪಯುಕ್ತ ಮಾಹಿತಿಯನ್ನೂ ಸಂಗ್ರಹಿಸಿದಂತೆ ಆಗುವುದಿಲ್ಲವೆ? ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿಗೆ ಈ ವಿವರ ಬೇಕೆ ಬೇಕು ಅಲ್ಲವೆ? ಜನಗಣತಿ ನಡೆಯುವುದು ಹೇಗಿದ್ದರೂ ದೇಶದ ಕಾನೂನಿನಂತೆ. ಹಾಗಾಗಿ ಈ ಗಣತಿಯಲ್ಲಿ ಜಾತಿವಾರು ಗಣತಿ ನಡೆಯಬೇಕೆಂದು ಕೇಂದ್ರ ಸರಕಾರಕ್ಕೆ ನಿರ್ದೇಶನ ಕೋರಿ ಯಾರಾದರೂ ಯಾವುದಾದರೂ ಉಚ್ಚ ನ್ಯಾಯಾಲಯದಲ್ಲೊ ಸರ್ವೋಚ್ಚ ನ್ಯಾಯಾಲಯದಲ್ಲೊ ರಿಟ್ ಪಿಟಿಷನ್ ಹೂಡಿದ್ದಾರೆಯೆ?

*–ಟಿ. ತಿಪ್ಪೇಸ್ವಾಮಿ, ವಕೀಲರು, ಬೆಂಗಳೂರು.*

*(ಗಾಂಧಿ ಎಂಬ ವಕೀಲರು ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿ ಕೇಂದ್ರ ಸರ್ಕಾರಕ್ಕೆ ಜಾತಿವಾರು ಜನಗಣತಿ ನಡೆಸಲು ನಿರ್ದೇಶನ ಕೋರಿ ಅಂತಹ ಆಜ್ಞೆ ಪಡೆದಿದ್ದಾರೆ. ನೀವು ವಿಚಾರಿಸಿದಂತಹ ಜಾತಿವಾರು ಗಣತಿಯ ಬಗ್ಗೆ ಕೆಳಗೆ ಪುಟ್ಟ ಲೇಖನವೊಂದು ಅಚ್ಚಾಗಿದೆ. ದಯವಿಟ್ಟು ಗಮನಿಸಿ –ಸಂ.)*

## ಒಂದು ವಿನಂತಿ

ಗೆಳೆಯ, ಗಿರೀಶ್ ಕೋಡ್ಗಿ ಅನುಕರಣೀಯ ಮಾದರಿಯೊಂದನ್ನು ಹಾಕಿಕೊಟ್ಟಿದ್ದಾರೆ. ಅವರು ತಮ್ಮ ವಕೀಲ ಸ್ನೇಹಿತರಿರುವ ಬೇರೆ ಬೇರೆ ವಕೀಲರ ಸಂಘಗಳಿಗೆ Communique ಸಂವಾದದ ಒಂದು ವರ್ಷದ ಚಂದಾ ಉಡುಗೊರೆಯಾಗಿ ಕೊಟ್ಟಿದ್ದಾರೆ. ಹೀಗೆ ಉಡುಗೊರೆ ಸ್ವೀಕರಿಸಿದ ವಕೀಲರ ಸಂಘಗಳು, ವಕೀಲರ ಸಂಘ, ಶೃಂಗೇರಿ, ವ.ಸಂ. ಮಂಗಳೂರು, ವ.ಸಂ. ಕುಂದಾಪುರ, ವ.ಸಂ., ಎನ್.ಆರ್. ಪುರ, ವ.ಸಂ. ಚಿಕ್ಕಮಗಳೂರು.

ಗೆಳೆಯರಿಗೆ ಉಡುಗೊರೆ ಕೊಟ್ಟಂತಾಯಿತು, ಜ್ಞಾನಪ್ರಸರಣಕ್ಕೆ ನೆರವಾದಂತೆಯೂ ಆಯಿತು. ಅನುಕರಣೀಯವಲ್ಲವೆ? ಶ್ರೀ ಗಿರೀಶ್ ಕೋಡ್ಗಿ (೯೪೪೮೩೨೩೭೩೭) ಅಭಿನಂದನೀಯರು. ನಮ್ಮ ಓದುಗರಲ್ಲಿ ಒಂದು ವಿನಂತಿ. ಇಂಥ ಉಡುಗೊರೆ ನೀವು ಕೊಡಬಹುದು. ಪರಿಶೀಲಿಸಿ. *– ಸಂ.*

## ಶ್ರೀಲಂಕಾದಲ್ಲಿ ಸಮನ್ವಯ ಕಮಿಷನ್ ನೇಮಕ

ತಮಿಳು ವ್ಯಾಘ್ರಗಳ ವಿರುದ್ಧ ಶ್ರೀಲಂಕಾದಲ್ಲಿ ನಡೆದ ದಶಕಗಳ ಹೋರಾಟದಲ್ಲಿ ವ್ಯಾಪಕವಾಗಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂಬ ಆಪಾದನೆಗಳ ಸತ್ಯಾಸತ್ಯತೆಗಳನ್ನು ತನಿಖೆ ಮಾಡಲು ಶ್ರೀಲಂಕಾ ಸರಕಾರ ಸಮನ್ವಯ ಕಮಿಷನ್ ನೇಮಿಸಿದೆ.

ಮಾನವ ಹಕ್ಕುಗಳ ಉಲ್ಲಂಘನೆಯ ಆಪಾದನೆಗಳು ಬಲವಾಗಿ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಈ ಕಮಿಷನ್ ನೇಮಕಗೊಂಡಿದೆ. ಮೇ ೧೫ ರಿಂದ ಆರು ತಿಂಗಳ ಅವಧಿಯಲ್ಲಿ ವರದಿ ಸಲ್ಲಿಸಲು ಸೂಚಿಸಲಾಗಿದೆ.ಚಿತ್ತರಂಜನ್ ಡಿ ಸಿಲ್ವಾ ಅಧ್ಯಕ್ಷರಾಗಿರುವ ಕಮಿಷನ್ನಿನಲ್ಲಿ ಇಬ್ಬರು ತಮಿಳರೂ ಸೇರಿದಂತೆ ಎಂಟು ಸದಸ್ಯರಿದ್ದಾರೆ.

## ಮೇ ತಿಂಗಳ ಪ್ರಚಲಿತ–ಜನಗಣತಿ

ನಮ್ಮ ಸ್ಥಿರ ಅಂಕಣ ಪ್ರಚಲಿತದ ಮೇ ಕಂತಿನಲ್ಲಿ ಜನಗಣತಿ ಮತ್ತು ಅದಕ್ಕಿರುವ ಕಾನೂನಿನ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿತ್ತು. ಅಂಕಣ ಮುದ್ರಿಸಿದ ನಂತರದ ಬೆಳವಣಿಗೆಯೊಂದರಲ್ಲಿ ಪ್ರಧಾನ ಮಂತ್ರಿಯ ಕಾರ್ಯಾಲಯ ಈ ಬಾರಿಯ ಜನಗಣತಿಯಲ್ಲಿ ಜಾತಿಯನ್ನು ಸೇರಿಸಲು ಸೂಚಿಸಿರುವುದಾಗಿ ವರದಿಯಾಗಿದೆ. ಹಾಗೆಯೆ ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ಆರ್. ಗಾಂಧಿ ಎಂಬ ವಕೀಲರು ರಿಟ್ ಪಿಟಿಷನ್ ಸಲ್ಲಿಸಿ ಕೇಂದ್ರ ಸರ್ಕಾರಕ್ಕೆ ಜಾತಿವಾರು ಜನಗಣತಿ ನಡೆಸಲು ಆಜ್ಞೆ ಪಡೆದಿದ್ದಾರೆ.

ಜಾತಿ ಆಧಾರಿತ ಜನಗಣತಿ ನಡೆದರೆ ಸಾರ್ವಜನಿಕ ಸಂಪನ್ಮೂಲಗಳನ್ನು, ಶೈಕ್ಷಣಿಕ ಅವಕಾಶಗಳನ್ನು, ಸರ್ಕಾರಿ ಉದ್ಯೋಗಾವಕಾಶಗಳನ್ನು ಜಾತಿವಾರು ಹಂಚಲು ಬೇಡಿಕೆ ಏಳಬಹುದು.

ಹಾಗೇನಾದರೂ ಆದರೆ ಮಂಡಲ್ ಕಮಿಷನ್ ವರದಿಯ ಅನುಷ್ಠಾನದ ನಂತರ ಕಾಣಿಸಿ ಕೊಂಡಂತಹ ಸಾಮಾಜಿಕ ತಲ್ಲಣಕ್ಕೆ ಭಾರತ ಇನ್ನೊಂದು ಬಾರಿ ಸಾಕ್ಷಿಯಾಗ ಬೇಕಾಗಬಹುದು.

ಜಾತಿ ಭಾರತದ ವಾಸ್ತವ (Cast is a fact in India). ಜಾತಿ ಆಧಾರಿತ ಜನಗಣತಿ ಬೇಡವೆಂದರೆ ವಾಸ್ತವವೊಂದನ್ನು ಮುಚ್ಚಿಟ್ಟಂತೆ.

ಅತ್ತ ದರಿ ಇತ್ತ ಪುಲಿ! *–ಸಂ.*

*ಸೂಚನೆ : ಪತ್ರಿಕೆಯ ಮುದ್ರಾಂ ಮತ್ತು ಅಂಚೆ ಬಟವಾಡೆ ಅನಿವಾರ್ಯ ಕಾರಣಗಳಿಂದ ತಡವಾಗುತ್ತಿದೆ. ಎಂದಿನಂತೆ ಸಹಕಾರವಿರಲಿ. –ಸಂ.*

***ಗ್ರಾಹಕ ಹಿತರಕ್ಷಣಾ ಕಾಯ್ದೆ, ೧೯೮೬ – ಸೆ. ೨(೧)(ಜಿ) – ನಗರಾಭಿವೃದ್ಧಿ ಟ್ರಸ್ಟ್‌ನಿಂದ ವಿತರಿಸಿದ ನಿವೇಶನದಲ್ಲಿ ಭೂ ಸ್ವಾಧೀನವಿಲ್ಲದೆ ರಸ್ತೆ ನಿರ್ಮಾಣ– ನಿವೇಶನದಾರ ಕಾನೂನಿನಡಿ ವೇದಿಕೆಗೆ ದೂರು ಸಲ್ಲಿಸಬಹುದೆ? ಪಕ್ಷಗಾರನಾಗಿ ಸರ್ಕಾರದ ನಡುವಳಿಕೆ ಹೇಗಿರಬೇಕು?***

ರಾಜಸ್ಥಾನದ ಬಿಕಾನೇರ್ ನಗರದ ನಗರಾಭಿವೃದ್ಧಿ ನ್ಯಾಸ ಅರ್ಜಿದಾರರಿಗೆ ಮನೆ ಕಟ್ಟಲು ನಿವೇಶನ ಒದಗಿಸಿ ಬಡಾವಣೆಯೊಂದನ್ನು ನಿರ್ಮಿಸಿತು. ನಂತರ ಖಾಲಿ ನಿವೇಶನಗಳ ಮೇಲೆ ಕಾನೂನಿನಂತೆ ಭೂಸ್ವಾಧೀನ ಮಾಡದೆ ರಸ್ತೆ ನಿರ್ಮಿಸಿತು. ಹೀಗಾಗಿ ಭೂಮಿ ನಿವೇಶನ ಕಳೆದುಕೊಂಡ ನಿವೇಶನ ಮಾಲೀಕರು ಪರಿಹಾರಕ್ಕಾಗಿ ಗ್ರಾಹಕ ರಕ್ಷಣಾ ಕಾಯ್ದೆಯಡಿ ವೇದಿಕೆಯ ಮೊರೆ ಹೋದರು. ವೇದಿಕೆ ಪರಿಹಾರವಾಗಿ ರೂ. ೨,೦೦,೦೦೦/–ವನ್ನು ನಿವೇಶನದಾರರಿಗೆ ಕೊಡಲು ಆಜ್ಞೆ ಮಾಡಿತು.

ಸರಕಾರ ಈ ಆದೇಶವನ್ನು ಪ್ರತಿ ಹಂತದಲ್ಲಿ ಪ್ರಶ್ನಿಸುತ್ತ ಸರ್ವೋಚ್ಚ ನ್ಯಾಯಾಲಯಕ್ಕೆ ಒಯ್ದಿತು. ಸರ್ಕಾರ ತನ್ನ ತಪ್ಪು ಮುಚ್ಚಿಕೊಳ್ಳಲು ನಿವೇಶನ ಮಾಲೀಕರೆ ಬೇಜವಾಬ್ದಾರಿಯಿಂದ ನಿವೇಶನವನ್ನು ರಕ್ಷಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆಂದು ಆಪಾದಿಸಿತು.

ಎರಡೂ ಕಡೆಯ ವಾದ ಕೇಳಿದ ನ್ಯಾಯಾಲಯ ವೇದಿಕೆಯ ಆದೇಶವನ್ನು ಎತ್ತಿ ಹಿಡಿದು ಇಂಥ ಪ್ರಕರಣವನ್ನು ಗ್ರಾಹಕರ ದೂರು ಎಂದು ಪರಿಗಣಿಸಿದ್ದು ಸರಿ ಎಂದಿದೆ.

ಮುಂದುವರಿದ ನ್ಯಾಯಾಲಯ 'ಸರ್ಕಾರ ನ್ಯಾಯಾಲಯಕ್ಕೆ ಹೋದಾಗ ಆದರ್ಶ ಪಕ್ಷಗಾರನಂತೆ ನಡೆದುಕೊಳ್ಳಬೇಕು. ಅದು ವ್ಯಾಜ್ಯ ಬೆಳೆಸುವಂತಹ ಯಾವುದೆ ನಿಲುವು ತಾಳಬಾರದು' ಎಂದು ಸರ್ಕಾರಕ್ಕೆ ಕಿವಿ ಮಾತು ಹೇಳಿದೆ.

*೨೦೧೦ ಎಐಆರ್‌ಎಸ್‌ಸಿಡಬ್ಲ್ಯು*

## ನ್ಯಾಯಾಲಯಗಳ ಅಂಗಳದಿಂದ

***ಒಂದು ರಾಜ್ಯದಲ್ಲಿ ಹಿಂದುಳಿದ ಮತ್ತು ದುರ್ಬಲತೆಂಯು ಅನುಸೂಚಿತವಾಗಿ ೧೬೧೨ ಆ ರಾಜ್ಯದಲ್ಲಿ ಔದ್ಯೋಗಿಕ ಮತ್ತು ಶೈಕ್ಷಣಿಕ ಮೀಸಲಾತಿಗೆ ಅರ್ಹವಾಗಿರುವ ಜಾತಿಯ ಜನಗಳು ಇನ್ನೊಂದು ರಾಜ್ಯದಲ್ಲಿ ಅನುಸೂಚಿತವಾಗದಿದ್ದರೂ ಮೀಸಲಿನ ಸೌಲಭ್ಯ ಬೇಡ ಬಹುದೆ? ಭಾರತದ ಸಂವಿಧಾನ. ಆರ್ಟಿಕಲ್ ೩೪೧(೨), ೧೬(೪) ಮತ್ತು ೧೬೨***

ಇಂತಹ ಮಹತ್ವದ ಪ್ರಶ್ನೆಯನ್ನು ಒಳಗೊಂಡ ಪ್ರಕರಣವೊಂದರಲ್ಲಿ ತೀರ್ಪು ನೀಡಿರುವ ಸರ್ವೋಚ್ಚ ನ್ಯಾಯಾಲಯ ಒಂದು ರಾಜ್ಯದ ಹಿಂದುಳಿದ ಜಾತಿ ಜನಾಂಗದ ಸದಸ್ಯರು ಪರ ರಾಜ್ಯದಲ್ಲಿ ಹಾಗೆಂದು ಅನುಸೂಚಿತರಾಗದಿದ್ದಲ್ಲಿ ಅಂತಹ ಮೀಸಲಿನ ಸೌಲಭ್ಯ ಕೇಳುವಂತಿಲ್ಲವೆಂದು ಸ್ಪಷ್ಟಪಡಿಸಿದೆ.

ಮುಂದುವರೆದ ನ್ಯಾಯಾಲಯ 'ಜಾತಿ ಆಧಾರಿತ ಮೀಸಲಾತಿ ಸರ್ಕಾರದ ನೀತಿ (policy)ಗೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ಅಂತಹ ವಿಷಯದಲ್ಲಿ ನ್ಯಾಯಾಲಯ ನಿರ್ದೇಶನ' ಕೊಡಲಾಗದು ಎಂದಿದೆ.

ಈ ತೀರ್ಪಿಗಾಗಿ ತನ್ನ ಹಿಂದಿನ ಹಲವಾರು ತೀರ್ಪುಗಳನ್ನು ಪರಿಶೀಲಿಸಿದ ನ್ಯಾಯಾಲಯ ಎಐಆರ್ ೨೦೦೫ ಎಸ್.ಸಿ. ೧೦೩೮ ಪ್ರಕರಣವನ್ನು ತಪ್ಪಾಗಿ ತೀರ್ಮಾನಿಸಲಾಗಿದೆ ಎಂದು ಅಭಿಪ್ರಾಯಪಟ್ಟಿದೆ.

*೨೦೧೦ ಎಐಆರ್ ಎಸ್.ಸಿ.ಡಬ್ಲ್ಯು ೧೫೬೮*

## ಪ್ರಾರಂಭಿಕ ಹೇಳಿಕೆ (Opening Statement)

## Just ಮಾತ್ ಮಾತಲ್ಲಿ...

ನ್ಯಾಯದಾನ ವ್ಯವಸ್ಥೆಯಲ್ಲಿ ಮಧ್ಯಸ್ಥಿಕೆಯೊಂದು ವಿನೂತನ ಪ್ರಯೋಗ. ಇದರ ಸಫಲತೆಗೆ ಕಕ್ಷಿದಾರರು ಸ್ವ–ಇಚ್ಛೆಯಿಂದ ಭಾಗವಹಿಸುವುದು ಅತ್ಯವಶ್ಯಕ. ಈ ನಿಟ್ಟಿನಲ್ಲಿ ಪ್ರಾರಂಭಿಕ ಹೇಳಿಕೆ ಬಹಳ ಮುಖ್ಯ.

ಪ್ರಾರಂಭಿಕ ಹೇಳಿಕೆಯನ್ನು ಮಧ್ಯಸ್ಥಿಕೆದಾರ, ಪ್ರಕ್ರಿಯೆಯ ಪ್ರಾರಂಭದಲ್ಲಿ ವಿವಾದದ ಎಲ್ಲಾ ಪಕ್ಷಗಾರರ ಮತ್ತು ಅವರ ವಕೀಲರ ಸಮಕ್ಷಮದಲ್ಲಿ ಮಾಡಬೇಕು.

ಪಕ್ಷಗಾರರಿಗೆ ಮಧ್ಯಸ್ಥಿಕೆ ಒಂದು ಹೊಸ ಅನುಭವ. ಮೊದಲ ಬಾರಿ ಮಧ್ಯಸ್ಥಿಕೆಗೆ ಆಗಮಿಸುವಾಗ ಅವರಲ್ಲಿ ಕೆಲವು ಸಂದೇಹಗಳು, ಆತಂಕಗಳು ಇರುವುದು ಸಹಜ. ಈ ಪ್ರಕ್ರಿಯೆಯಿಂದ ತನಗೇನು ಲಾಭ ಮತ್ತು ನ್ಯಾಯಾಲಯದ ವ್ಯವಸ್ಥೆಗಿಂತ ಇದು ಯಾವ ರೀತಿಯಲ್ಲಿ ಭಿನ್ನ ಎಂಬ ಗೊಂದಲ ಅವರಲ್ಲಿರುತ್ತದೆ. ಇವೆಲ್ಲವನ್ನು ಹೋಗಲಾಡಿಸುವುದು ಮಧ್ಯಸ್ಥಿಕೆದಾರನ ಕರ್ತವ್ಯ.



ಎಸ್.ಎನ್. ಪ್ರಶಾಂತ ಚಂದ್ರ,
snpchandra@gmail.com

ಪಕ್ಷಗಾರರನ್ನು ಮತ್ತು ಅವರ ವಕೀಲರನ್ನು ಮುಗುಳ್ನಗೆಯಿಂದ ಆತ್ಮೀಯವಾಗಿ ಕೊಠಡಿಗೆ ಆಹ್ವಾನಿಸಿ ಸ್ವಪರಿಚಯ ಮತ್ತು ವಕೀಲರ ಪರಿಚಯ ಮಾಡಿಕೊಳ್ಳಬೇಕು. ನಂತರದ ಸಮಯ ಪ್ರಾರಂಭಿಕ ಹೇಳಿಕೆಗೆ.

ಪ್ರಾರಂಭಿಕ ಹೇಳಿಕೆಯಲ್ಲಿ ಮಧ್ಯಸ್ಥಿಕೆಯ ಉದ್ದೇಶ, ಅಗತ್ಯ ಹಾಗೂ ಪಕ್ಷಗಾರರಿಗೆ ಇದರಿಮದ ಸಿಗುವ ಲಾಭಗಳ ಬಗ್ಗೆ ಪರಿಚಯ ಮಾಡಿ ಕೊಡಬೇಕು. ಪ್ರಕ್ರಿಯೆಯಲ್ಲಿ ತನ್ನ ತಟಸ್ಥತೆ ಮತ್ತು ಗೌಪ್ಯತೆಯನ್ನು ಕಾಪಾಡುವ ಬಗ್ಗೆ ಸೂಕ್ತವಾಗಿ ಹೇಳಬೇಕು.

ತಾನು ನ್ಯಾಯಾಧೀಶ ಅಥವಾ ವಕೀಲರಂತೆ ಅಲ್ಲ. ತನ್ನ ಅಭಿಪ್ರಾಯವನ್ನು, ತೀರ್ಮಾನವನ್ನು ಪಕ್ಷಗಾರರ ಮೇಲೆ ಹೇರುವುದಿಲ್ಲ. ಎಲ್ಲಾ ನಿರ್ಧಾರಗಳನ್ನು ಪಕ್ಷಗಾರರೇ ಮಾಡುತ್ತಾರೆ ಮತ್ತು ಅವರ ನಿರ್ಧಾರವೇ ಅಂತಿಮ. ಮಧ್ಯಸ್ಥಿಕೆ ಒಂದು ಸ್ವ–ಇಚ್ಛೆಯಿಂದ ಭಾಗವಹಿಸುವ ಪ್ರಕ್ರಿಯೆಯಾದ್ದರಿಂದ, ಅವರ ಮೇಲೆ ಯಾವುದೇ ಒತ್ತಡವಿಲ್ಲ. ಪಕ್ಷಗಾರರು ಮಾಡಿದಂತಹ admission, confession, concession, demand ಯಾವುದನ್ನೂ ಸಹ, ಯಾವುದೇ ಸಂದರ್ಭದಲ್ಲಿ ಹಿಂಪಡೆಯಬಹುದು. ಮತ್ತು modify ಮಾಡಬಹುದು. ಒಂದು ವೇಳೆ ಮಧ್ಯಸ್ಥಿಕೆ ವಿಫಲವಾಗಿ, ದಾವೆ ನ್ಯಾಯಾಲಯಕ್ಕೆ ಹಿಂತಿರುಗಿದರೆ, ಮಧ್ಯಸ್ಥಿಕೆ ಪ್ರಯತ್ನ ವಿಫಲವಾಯಿತು ಎಂಬ report ಬಿಟ್ಟರೆ, ಬೇರೆ ಯಾವ ಕಾರಣಗಳನ್ನು record ಮಾಡಲಾಗುವುದಿಲ್ಲ. ಅಷ್ಟೇ ಅಲ್ಲ, ಪ್ರಕ್ರಿಯೆಯಲ್ಲಿ ನಡೆದಂತಹ ವಿಚಾರಗಳನ್ನು, ಚರ್ಚೆ, ಸಂಧಾನದ ಅಂಶಗಳನ್ನು, ನ್ಯಾಯಾಲಯದಲ್ಲಿ ಉಪಯೋಗ ಅಥವಾ ದುರುಪಯೋಗಗೊಳಿಸುವ ಅವಕಾಶ ಇಲ್ಲ. ಮಧ್ಯಸ್ಥಿಕೆದಾರ, ಕೂಡ ನ್ಯಾಯಾಲಯದಲ್ಲಿ ಈ ಪ್ರಕ್ರಿಯೆ ಬಗ್ಗೆ, ಸಾಕ್ಷಿ ಕೊಡಲು ಅವಕಾಶವಿಲ್ಲ. ಇದನ್ನೆಲ್ಲ ಪಕ್ಷಗಾರರಿಗೆ ಮತ್ತು ವಕೀಲರಿಗೆ ಮನವರಿಕೆ ಮಾಡಿಕೊಡಲಾಗುತ್ತದೆ.

ಮಧ್ಯಸ್ಥಿಕೆ ವಿಫಲವಾದರೂ, ಪಕ್ಷಗಾರರಿಗೆ ಲಾಭ ಇಲ್ಲದಿದ್ದರೂ ನಷ್ಟವೇನಿಲ್ಲ. ಮಧ್ಯಸ್ಥಿಕೆ, ಪಕ್ಷಗಾರರಿಗೆ ಒದಗಿ ಬಂದಿರುವ ಒಂದು ಸುವರ್ಣಾವಕಾಶ. ತೆರೆದ ಮನಸ್ಸಿನಿಂದ ಭಾಗವಹಿಸಿ ಮಧ್ಯಸ್ಥಿಕೆಯ ಸಂಪೂರ್ಣ ಲಾಭವನ್ನು ಪಡೆಯಬಹುದು. ಹಾಗೂ ಅನುಕೂಲಕರವಾಗಿದ್ದರೆ, ರಾಜಿ ಪ್ರಯತ್ನ ಮುಂದುವರಿಸಿ ದಾವೆಗೆ ಮತ್ತು ಪಕ್ಷಗಾರರ ನಡುವಿನ ಸಂಘರ್ಷಕ್ಕೆ ಅಂತ್ಯ ಹಾಡಬಹುದು. ಈ ಅವಕಾಶ ನ್ಯಾಯಾಲಯದಲ್ಲಿ ದೊರಕುವುದಿಲ್ಲ. ಅಂತಿಮ ನಿರ್ಧಾರ ಪಡೆಯುವುದರಿಂದ ಸಿಗುವ ಲಾಭಗಳು, ಸಮಯದ ಲಾಭ, ಮನಸ್ಸಿಗೆ ನೆಮ್ಮದಿ, ಒಬ್ಬ ಸೋತು ಸಾಯುವ ಇನ್ನೊಬ್ಬ ಗೆದ್ದು ಹೈರಾಣಾಗುವ ಸಂದರ್ಭ ಇಲ್ಲಿಲ್ಲ. ನ್ಯಾಯಾಲಯಕ್ಕೆ ಕಟ್ಟಿದ court fee refund ಬಗ್ಗೆ ಸಹ ಮನದಟ್ಟು ಮಾಡಬೇಕು.

ಒಟ್ಟಿನಲ್ಲಿ ಮಧ್ಯಸ್ಥಿಕೆ ಪಕ್ಷಗಾರರಿಗೆ, ತಮ್ಮ ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು ಹಂಚಿಕೊಳ್ಳಲು ವೇದಿಕೆಯನ್ನು ಮಾಡಿಕೊಡುತ್ತದೆ. ಮತ್ತು ಮಧ್ಯಸ್ಥಿಕೆದಾರ ಒಬ್ಬ ಸುಗಮಕಾರಕನಾಗಿ ತನ್ನ ಕರ್ತವ್ಯವನ್ನು ಸೇವಾಮನೋಭಾವದಿಂದ ಮಾಡುತ್ತಾನೆ ಎಂಬುದು ಪಕ್ಷಗಾರರಿಗೆ ಅರಿವಾಗಬೇಕು.

ಈ ಅಂಶಗಳನ್ನು ಮಧ್ಯಸ್ಥಿಕೆದಾರ ತನ್ನ ಪ್ರಾರಂಭಿಕ ಹೇಳಿಕೆಯಲ್ಲಿ ಪಕ್ಷಗಾರರಿಗೆ ಸವಿಸ್ತಾರವಾಗಿ ಪರಿಚಯಿಸಿದಾಗ, ಪಕ್ಷಗಾರರಲ್ಲಿದ್ದ ಆತಂಕ, ಸಂದೇಹ ದೂರವಾಗಿ ಮಧ್ಯಸ್ಥಿಕೆ, ಮಧ್ಯಸ್ಥಿಕೆದಾರ ಮತ್ತು ಮಧ್ಯಸ್ಥಿಗೆ ಪ್ರಕ್ರಿಯೆ ಮೇಲೆ ವಿಶ್ವಾಸಹುಟ್ಟಿ, ಇದರಲ್ಲಿ ಮುಕ್ತವಾಗಿ ಭಾಗವಹಿಸುವಲ್ಲಿ ಸಹಾಯವಾಗುತ್ತವೆ.

ಈ ಮೇಲಿನವುಗಳಲ್ಲಿ ಯಾವುದಾದರೂ ಕೆಲವು ಅಂಶಗಳನ್ನು ಪ್ರಾರಂಭಿಕ ಹೇಳಿಕೆಯಲ್ಲಿ ಬಿಟ್ಟಲ್ಲಿ, ಪಕ್ಷಗಾರರ ಮನದಲ್ಲಿ ಕೆಲವು ಸಂದೇಹಗಳು ಹಾಗೆ ಉಳಿದು ಮಧ್ಯಸ್ತಿಕೆ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ತೆರೆದ ಮನದಿಂದ ಭಾಗವಹಿಸಲು ಅಡಚಣೆಯಾಗಬಹುದು ಮತ್ತು ಮಧ್ಯಸ್ಥಿಕೆಯ ಪ್ರಯತ್ನವೇ ವಿಫಲವಾಗಬಹುದು. ●

## ವಕೀಲರ ಶುಲ್ಕ ಏರಿಕೆ

ಸರಕಾರಿ ವಕೀಲರ ಸಂಭಾವನೆಯಲ್ಲಿ ಭಾರಿ ಏರಿಕೆಯಾಗಿದೆ. ಈ ಏರಿಕೆಯಿಂದ ಸರಕಾರಿ ವಕೀಲರ ದಶಕಗಳಷ್ಟು ಹಳೆಯ ಬೇಡಿಕೆ ಈಡೇರಿಸಿದಂತಾಗಿದೆ.

ರಾಜ್ಯದಾದ್ಯಂತ ಸರಕಾರವನ್ನು ಪ್ರತಿನಿಧಿಸಲು ಸುಮಾರು ಒಂದೂವರೆ ಸಾವಿರದಷ್ಟು ವಕೀಲರಿದ್ದು ಅವರೆಲ್ಲರಿಗೂ ಈ ಏರಿಕೆಯ ಲಾಭ ಸಿಗಲಿದೆ.

ಅಡ್ವೋಕೆಟ್ ಜನರಲ್, ಹೆಚ್ಚುವರಿ ಅಡ್ವೋಕೆಟ್ ಜನರಲ್ ಮತ್ತು ರಾಜ್ಯ ಅಭಿಯೋಜಕರ (StAte Public Prosecutor) ಸಂಭಾವನೆಯೂ ಏರಿಕೆ ಕಂಡಿದೆ.

**ಯಾರಿಗೆಷ್ಟು?** : ಅಡ್ವೋಕೆಟ್ ಜನರಲ್ ಮತ್ತು ಹೆಚ್ಚುವರಿ ಅ.ಜ.ಗೆ ಪ್ರತಿತಿಂಗಳೂ ರೂ. ೫೦,೦೦೦/– ಮತ್ತು ಪ್ರತಿ ವಿಚಾರಣೆಗೆ ರೂ. ೫೦,೦೦೦/– ಸರ್ವೋಚ್ಚ ನ್ಯಾಯಾಲಯಕ್ಕೆ ಹಾಜರಾದರೆ ರೂ. ೨೫,೦೦೦/–.

ರಾಜ್ಯ ಅಭಿಯೋಜಕರಿಗೆ ಪ್ರತಿ ತಿಂಗಳೂ ರೂ. ೧೬,೦೦೦/– ಮತ್ತು ರೂ. ೩,೦೦೦/ – ಭತ್ಯೆ ಜೊತೆಗೆ ಪ್ರತಿ ಪ್ರಕರಣದ ಇತ್ಯರ್ಥಕ್ಕೆ ಪ್ರತ್ಯೇಕ ಶುಲ್ಕ.

ಸರಕಾರಿ ವಕೀಲರಿಗೆ ರೂ. ೧೬,೦೦೦/– ಮಾಸಿಕ + ಭತ್ಯೆ + ಪ್ರಕರಣ ಇತ್ಯರ್ಥವಾದಾಗ ರೂ. ೬೦೦/–

ಸರಕಾರಿ ಪ್ಲೀಡರ್‌ಗೆ: ಮಾಸಿಕ ರೂ. ೧೦,೦೦೦ + ಭತ್ಯೆ + ಪ್ರಕರಣ ಇತ್ಯರ್ಥವಾದರೆ ರೂ. ೨೫೦/–

ಜಿಲ್ಲಾ ನ್ಯಾಯಾಲಯಗಳ ಸರಕಾರಿ ವಕೀಲರಿಗೆ : ರೂ. ೧೨,೦೦೦/– ಮಾಸಿಕ

ಜಿಲ್ಲಾ ನ್ಯಾಯಾಲಯಗಳ ಸಹಾಕಯ ವಕೀಲರಿಗೆ: ರೂ. ೧೦,೦೦೦/– ಮಾಸಿಕ

# ನ್ಯಾಯಾಂಗದಲ್ಲಿ ಶೀಘ್ರವಾಗಿ ಆಗಬೇಕಾಗಿರುವ ಸುಧಾರಣೆಗಳು

ನ್ಯಾಯಕ್ಕಾಗಿ ನ್ಯಾಯಾಲಯಕ್ಕೆ ಮೊರೆ ಹೋಗುವ ಸಾರ್ವಜನಿಕರ ದಾವೆಗಳು ಶೀಘ್ರವಾಗಿ ಇತ್ಯರ್ಥವಾದಲ್ಲಿ ಸಮಯ, ಹಣ, ಮನೋವ್ಯಾಕುಲತೆ, ಆರೋಗ್ಯ ಮುಂತಾದವುಗಳಿಗೆ ಆಗುವ ಹಾನಿಗಳನ್ನು ತಪ್ಪಿಸಬಹುದು ಮತ್ತು ದಾವೆದಾರರುಗಳೇ ಫಲಾನುಭವಿಗಳು ಆಗುತ್ತಾರೆ. ಶೀಘ್ರವಾಗಿ ದಾವೆಗಳು ಇತ್ಯರ್ಥ ಆದರೆ ಇವರ ಮಕ್ಕಳು, ಮೊಮ್ಮಕ್ಕಳು, ವಾರಸುದಾರರು ನ್ಯಾಯಾಲಯದಲ್ಲಿ ಹಾಜರಾಗುವುದನ್ನು ತಪ್ಪಿಸಬಹುದು.



ಚಿಕ್ಕಮುನಿಯಪ್ಪ

ಲೋಕಾಯುಕ್ತ, ಕೌಟುಂಬಿಕ, ದಂಡಾಧಿಕಾರಿಗಳ ನ್ಯಾಯಾಲಯಗಳನ್ನು ಹೊರತುಪಡಿಸಿದರೆ ಈಗಿನ ನ್ಯಾಯಾಂಗದಲ್ಲಿ ೫ ಹಂತಗಳಿವೆ. ನಮ್ಮ ನ್ಯಾಯಾಂಗದಲ್ಲಿ ಮುನ್ಸೀಫ್ ನ್ಯಾಯಾಲಯದಿಂದ ಹಿಡಿದು ಸುಪ್ರೀಂ ಕೋರ್ಟಿನವರೆಗೂ ಇರುವ ೫ ಹಂತಗಳಿಗೆ ಬದಲಾಗಿ ೩ ಹಂತಗಳಿಗೆ ಇಳಿಸಬೇಕಾಗಿದೆ. ಎಂತಹ ತೊಡಕಿನ ದಾವೆಯಾದರೂ ೪ ಅಥವಾ ೫ ವರ್ಷಗಳಲ್ಲಿ ಅಂತಿಮವಾಗಿ ತೀರ್ಪು ಆಗುವ ವ್ಯವಸ್ಥೆಯಾಗಬೇಕು. ೫ ಹಂತಗಳುಳ್ಳ ನ್ಯಾಯಾಂಗದ ವ್ಯವಸ್ಥೆಯನ್ನು ೩ ಹಂತಗಳಿಗೆ ಇಳಿಸಿದರೆ, ಬಡವರು ದುರ್ಬಲರು ಬದುಕಿ ನೆಮ್ಮದಿಯಿಂದ ಇರಲಿಕ್ಕೆ ಸಾಧ್ಯವಾಗುತ್ತದೆ.

ತಾಲ್ಲೂಕಿನಲ್ಲಿ ೧ ನೇ ಹಂತ–ಮುನ್ಸೀಫ್ ನ್ಯಾಯಾಲಯ. ೨ನೇ ಹಂತ – ಸಿವಿಲ್ ನ್ಯಾಯಾಲಯ, ೩ನೇ ಹಂತ – ಜಿಲ್ಲಾ ನ್ಯಾಯಾಲಯ, ೪ನೇ ಹಂತ – ಉಚ್ಚ ನ್ಯಾಯಾಲಯ ಮತ್ತು ರಾಷ್ಟ್ರ ಮಟ್ಟದಲ್ಲಿ ೫ನೇ ಹಂತ – ಭಾರತದ ಸರ್ವೋಚ್ಚ ನ್ಯಾಯಾಲಯಗಳು ಇವೆ. ಕೋರ್ಟಿನಲ್ಲಿ ಕೋರ್ಟುಗಳನ್ನು ಇಟ್ಟುಕೊಳ್ಳುವುದರ ಬದಲು ಒಂದೇ ಕೋರ್ಟನ್ನು ಇಟ್ಟುಕೊಂಡರೆ ನ್ಯಾಯುವನ್ನು ಬಹುಬೇಗ ನೀಡುವುದಕ್ಕೆ ಅನುಕೂಲವಾಗುತ್ತದೆ; ಒಂದು ಪೀಠದಿಂದ ಮತ್ತೊಂದು ಪೀಠಕ್ಕೆ ಅಲೆಯುವುದು ತಪ್ಪುತ್ತದೆ. ರಾಜ್ಯದ ಹಂತದಲ್ಲಿ ೨ ಹಂತಗಳ ನ್ಯಾಯಾಲಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸುಪ್ರೀಂ ಕೋರ್ಟ್ ೩ನೇ ಹಂತ ನ್ಯಾಯಾಲಯಗಳು ಇದ್ದರೆ ಸಾಕು. ಹೈಕೋರ್ಟಿನ ಒಳಗೆ ಏಕ ಸದಸ್ಯ ಪೀಠ, ದ್ವಿ ಸದಸ್ಯ ಪೀಠ – ಹೀಗೆಲ್ಲಾ ಕೋರ್ಟಿನೊಳಗೆ ಕೋರ್ಟುಗಳು ಇವೆ. ದಂಪತಿಗಳ ನಡುವಿನ ವ್ಯಾಜ್ಯಗಳಿಗೆ ಸಂಬಂಧಿಸಿದ ದಾವೆ ಮತ್ತು ಪಾಲುಗಾರಿಕೆಗಳಿಗೆ ಸಂಬಂಧಿಸಿದ ದಾವೆಗಳು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕಿನ ಕೋರ್ಟುಗಳಲ್ಲಿ ಇತ್ಯರ್ಥವಾಗಬೇಕು. ಅವು ಯಾವ ಕಾರಣಕ್ಕೂ ಮೇಲಿನ ಕೋರ್ಟುಗಳಿಗೆ ಬರಲೇಬಾರದು. ಆ ಪ್ರಕರಣಗಳು ಅತಿ ಕಡಿಮೆ ಅವಧಿಯಲ್ಲಿ ತೀರ್ಮಾನವಾಗಬೇಕು. ಮೊಟ್ಟ ಮೊದಲು ಯಾವ ಹಂತದ ನ್ಯಾಯಾಲಯದಲ್ಲಿ ದಾವೆ ದಾಖಲಾಗುತ್ತದೆಯೋ ಅದೇ ಹಂತದಲ್ಲಿ ನ್ಯಾಯಾಲಯವು ಕಕ್ಷಿದಾರರಿಂದ ಪಡೆಯಬೇಕಾದ ಕಡತಗಳನ್ನೆಲ್ಲಾ ಪಡೆಯಬೇಕು ಮತ್ತು ಎರಡೂ ಕಡೆಯ ಕಕ್ಷಿದಾರರನ್ನು ಕೋರ್ಟಿಗೆ ಕರೆಸುವ ಸಂಪ್ರದಾಯಗಳು ಆ ಹಂತದಲ್ಲೇ ಅಂತಿಮ ಆಗಲೇಬೇಕು.

ನ್ಯಾಯ ಸಿಗದೆ ಮೇಲಿನ ಕೋರ್ಟಿನಲ್ಲಿ ಮೇಲ್ಮನವಿ (ಅಪೀಲ್) ಮಾಡಿಕೊಂಡಾಗ ಎದುರು ವಕೀಲರಿಗೆ ವಿಷಯವನ್ನು ತಿಳಿಸಬೇಕಾದ ಅಗತ್ಯವಿದೆ ವಿನಾ ಎದುರು ಕಕ್ಷಿದಾರರನ್ನು ಕೋರ್ಟಿಗೆ ಕರೆಸುವ ವ್ಯವಸ್ಥೆ ಇರಬಾರದು.

ಅಪೀಲ್ ದಾವೆಯಲ್ಲಿ ಕೋರ್ಟಿನ ನ್ಯಾಯಾಧೀಶರು ಕೆಳಗಿನ ಕೋರ್ಟಿನ ಕಡತಗಳು ಬಂದನಂತರ ಆ ಒರಿಜಿನಲ್ ದಾಖಲೆ ಪತ್ರಗಳನ್ನು ಅವಲಂಬಿಸಿ ಹಾಜರಾದ ವಕೀಲರಿಂದ ವಾದ–ವಿವಾದಗಳನ್ನು ಕೇಳಿ, ರಿಟರ್ನ್ ಆರ್ಗ್ಯುಮೆಂಟನ್ನು ಅಧ್ಯಯನ ಮಾಡಿ ದಾವೆಯ ತೀರ್ಪನ್ನು ಕೊಡಬೇಕು. ಯಾವ ಕೋರ್ಟಿನಲ್ಲಿ ಮೇಲ್ಮನವಿಗೆ ಸಂಬಂಧಿಸಿದ ದಾವೆ ಬರುತ್ತದೆಯೋ ಆ ಕೋರ್ಟಿನವರು ಹೊಸ ದಾಖಲೆಗಳನ್ನು ತೆಗೆದುಕೊಳ್ಳಬಾರದು.

ಇತ್ತೀಚೆಗೆ ನ್ಯಾಯಾಧೀಶರು ಅಧಿಕಾರಿಗಳ ಒತ್ತಡಕ್ಕೆ, ಪುಢಾರಿಗಳ ಒತ್ತಡಕ್ಕೆ, ಸ್ವಾಮಿಗಳ ಪ್ರಭಾವಕ್ಕೆ, ಭ್ರಷ್ಟಾಚಾರಗಳಿಗೆ ಒಳಗಾಗಿ ತೀರ್ಪುಗಳನ್ನು ಕೊಡುತ್ತಿದ್ದಾರೆ ಎಂಬ ಸುದ್ದಿಯು ಜನರ ಮಧ್ಯೆ ಹರಡಿದೆ. ಅಂತಹ ತೀರ್ಪಿನ ಸತ್ಯಾ ಸತ್ಯತೆಯನ್ನು ತಿಳಿಯಬೇಕಾದರೆ ತೀರ್ಪನ್ನು ಪ್ರಕಟಿಸುವುದಕ್ಕೆ ಮೊದಲು ಆ ತೀರ್ಪನ್ನು ತಜ್ಞ ವಕೀಲರ ತಂಡವು ಪರೀಕ್ಷಿಸಬೇಕು. ಅವರ ಒಪ್ಪಿಗೆಯ ನಂತರ ನೀಡುವ ತೀರ್ಪನ್ನು ಘೋಷಿಸಬೇಕು. ಈ ಕ್ರಮದಿಂದ ತೀರ್ಪನ್ನು ಬರೆದಿರುವ ನ್ಯಾಯಾಧೀಶರ ಹೊಣೆಗಾರಿಕೆಯನ್ನು (Accountability) ತಿಳಿದುಕೊಳ್ಳಲಿಕ್ಕೆ ನೆರವಾಗುತ್ತದೆ. ಈ ಹೊಣೆಗಾರಿಕೆಯನ್ನು ಜಾರಿಗೆ ತಂದಾಗ ನ್ಯಾಯಾಧೀಶರು ತಪ್ಪು ಮಾಡಲಿಕ್ಕೆ ಅವಕಾಶವಿರುವುದಿಲ್ಲ. ಹೊಣೆಗಾರಿಕೆಯನ್ನು ಉಲ್ಲಂಘನೆ ಮಾಡಿದ್ದರೆ ಅಂತಹವರನ್ನು ಶಿಕ್ಷೆಗೆ ಗುರಿಪಡಿಸಬೇಕು.

ಪಾಲುಗಾರಿಕೆಗೆ ಸಂಬಂಧಪಟ್ಟ ಆಸ್ತಿಯ ದಾವೆಗಳು ಕೆಳಹಂತದಲ್ಲಿ ತೀರ್ಪು ಆಗಬೇಕು. ಈ ವಿಷಯಗಳಲ್ಲಿ ಆಯಾಯ ಪ್ರದೇಶದ ರೆವಿನ್ಯೂ ಅಧಿಕಾರಿಗಳಿಂದ, ಸ್ಥಳೀಯ ಹಿರಿಯ ನಾಗರಿಕರಿಂದ ವಾಸ್ತವಿಕ ಮಾಹಿತಿಯನ್ನು ಪಡೆದು ನ್ಯಾಯಬದ್ಧವಾದ ತೀರ್ಪನ್ನು ನೀಡಬೇಕು. ಇಂತಹ ದಾವೆಗಳಿಗೆ ಮೇಲ್ಮನವಿ (Appeal) ಆಗದಂತೆ ವ್ಯವಸ್ಥೆ ಆಗಬೇಕು.

ದಾವೆಗಳು ಎಷ್ಟೇ ತೊಡಕಾಗಿದ್ದರೂ ಎಷ್ಟೇ ನಿಧಾನವೆಂದರೂ ಸಹ ೪–೫ ವರ್ಷಗಳ ಅವಧಿಯ ಒಳಗಾಗಿ ಹಾಗೂ ಕಟ್ಟಕಡೆಯದಾಗಿ (ಫೈನಲ್ ಆಗಿ) ತೀರ್ಪನ್ನು ಕೊಡುವ ವ್ಯವಸ್ಥೆ ಆಗಬೇಕು.

ವಾದ–ವಿವಾದಗಳು ಮುಗಿದ ನಂತರ ಅದೇ ದಿನ ನ್ಯಾಯಾಧೀಶರು ವಾದ–ವಿವಾದಗಳನ್ನು ಬರೆದಿಡಬೇಕು. ಇಲ್ಲದಿದ್ದರೆ ಕೆಲವು ವಾದ–ವಿವಾದಗಳ ಅಂಶಗಳನ್ನು ನ್ಯಾಯಾಧೀಶರು ಮರೆಯಬಹುದು. ನ್ಯಾಯಾಧೀಶರು ವಾದ–ವಿವಾದಗಳ ನಂತರ ನೀಡುವ ತೀರ್ಪನ್ನು ಕಾಯ್ದಿರಿಸಿದರೆ ಸಂಶಯದ ಅನೇಕ ಊಹಾಪೋಹಗಳು ಉದ್ಭವ ಆಗುತ್ತವೆ ಮತ್ತು ಭ್ರಷ್ಟಾಚಾರಗಳಿಗೆ ಅವಕಾಶಗಳನ್ನು ನೀಡಿದಂತಾಗುತ್ತದೆ.

ಇತ್ತೀಚೆಗೆ ಬರುತ್ತಿರುವ ತೀರ್ಪುಗಳನ್ನು ಕೆಲವು ತೀರ್ಪುಗಳು ಸ್ಥಳೀಯ ವಾಸ್ತವಿಕತೆಗೆ ಸಮನಾಗಿರುವುದಿಲ್ಲ. ಇದಕ್ಕೆ ಕಾರಣ ನ್ಯಾಯಾಧೀಶರು ಮೂಲ ಕಡತಗಳನ್ನು ಒಂದು ಬಾರಿ ಆದರೂ ನೋಡದೆ ವಾದ ವಿವಾದಗಳಿಗೆ ಮರುಳಾಗಿ ತೀರ್ಪನ್ನು ಕೊಡುವುದರಿಂದ, ನ್ಯಾಯಾಧೀಶರು ತೀರ್ಪುಗಳನ್ನು ಕೊಡಲಿಕ್ಕೆ ಹಿರಿಯ ವಕೀಲ ಮತ್ತು ಕಿರಿಯ ವಕೀಲ ಎಂಬ ಭಾವನೆಯನ್ನು ಗಣನೆಗೆ ತೆಗೆದುಕೊಳ್ಳಬಾರದು. ವಕೀಲರು ಮುಂದಿಡುವ ವಾಸ್ತವಾಂಶಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಭಾಷಾ ಶೈಲಿಯ ಕಡೆಗೆ ಗಮನಕೊಡದೆ ತೀರ್ಪನ್ನು ಕೊಡಬೇಕು.

ಸಮಾಜದ ಪ್ರತಿಷ್ಠಿತರಲ್ಲಿ ಕೆಲವರು ನ್ಯಾಯಾಧೀಶರು ಪರಿಚಯ ಇರುವಾಗ ನೇರವಾಗಿ ಅವರ ಮೇಲೆ ಪ್ರಭಾವ ಬೀರಿ ಅಥವಾ ತಮಗೆ ಅನುಕೂಲವಾಗುವ ನ್ಯಾಯಾಧೀಶರ ಮುಂದೆ ತಮ್ಮ ದಾವೆಗಳು ಬರುವ ಹಾಗೆ ವ್ಯವಸ್ಥೆ ಮಾಡಿ ತೀರ್ಪುಗಳನ್ನು ಪಡೆಯುತ್ತಾರೆ. ಇಂತಹ ಪ್ರಸಂಗಗಳಿಗೆ ಅವಕಾಶ ಕೊಡಬಾರದು.

ಕೆಳ ನ್ಯಾಯಾಲಯಗಳಿಂದ ಹಿಡಿದು ಘನ ಸರ್ವೋಚ್ಚ ನ್ಯಾಯಾಲಯದವರೆವಿಗೆ ನ್ಯಾಯಾಧೀಶರನ್ನು ದಾವೆಯ ತೀರ್ಪುಗಳಲ್ಲಿ ಹೊಣೆಗಾರಿಕೆಗೊಳಪಡಿಸುವಂತಹ ಮಹತ್ತರ ಕಾರ್ಯವನ್ನು ಭಾರತದ ಸಂವಿಧಾನಕ್ಕೆ ಸೇರಿಸುವುದು ಅತ್ಯಗತ್ಯ.

ನ್ಯಾಯಾಧೀಶರು ತಮ್ಮ ತೀರ್ಪುಗಳನ್ನು ಕೊಡುವಾಗ ಚಾಲ್ತಿಯಲ್ಲಿರುವ ಪದ್ಧತಿಗಳನ್ನು ಗಮನದಲ್ಲಿ ಇಟ್ಟುಕೊಂಡಿರಬೇಕು. ಏಕೆಂದರೆ "ಜನರಿಂದ, ಜನರಿಗೋಸ್ಕರ" ಎಂಬುದರ ಹಿತಕ್ಕಾಗಿ ರೂಪುಗೊಂಡಿರುವ ಸಂಸತ್ತಿನ ಮಸೂದೆಗಳನ್ನು ಸರ್ಕಾರದ ಕಾನೂನಿನ / ಕಾಯಿದೆಯ ಕಟ್ಟಳೆಗಳನ್ನು ಆದೇಶಗಳನ್ನು ತೀರ್ಪುಗಳಲ್ಲಿ ಅನುಷ್ಠಾನಕ್ಕೆ ತರಲು ವಿಫಲರಾಗಿರುತ್ತಾರೆ. ಈ ನಿಟ್ಟಿನಲ್ಲಿ ಆದ್ಯತೆ ನೀಡದೆ ಇರುವುದು ವಿಷಾದಕರ. ಒಂದೇ ರೀತಿಯ ದಾವೆಯಲ್ಲಿ ಭಿನ್ನ. ಭಿನ್ನವಾದ ತೀರ್ಪುಗಳು ಬರುತ್ತಿರುವುದು ಜನರ ಮಧ್ಯೆ ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ಸುಪ್ರೀಂ ಕೋರ್ಟಿನಲ್ಲಿ ಈಗ ಚಾಲ್ತಿಯಲ್ಲಿರುವ "ರಿವ್ಯೂ" ಮತ್ತು "ಕ್ಯುರೇಟೀವ್" ಹಂತಗಳ ಪಿಟಿಷನ್‌ಗಳನ್ನು ನೊಂದ ಕಕ್ಷಿದಾರರಿಂದ ದಾಖಲಿಸುವ ಪದ್ಧತಿಯು ನೆಪಮಾತ್ರಕ್ಕಾಗಿ ಇವೆ. ಏಕೆಂದರೆ ಸದರಿ ಪಿಟಿಷನ್‌ಗಳಲ್ಲಿ ಯಾವ ನ್ಯಾಯಾಧೀಶರು ತೀರ್ಪುಗಳನ್ನು ನೀಡಿರುತ್ತಾರೋ ಅವರ ನ್ಯಾಯಾಲಯದಲ್ಲೇ ದಾವೆಗಳು ಪರಿಶೀಲನೆಗೆ ಬರುತ್ತವೆ. ಇಂತಹ ದಾವೆಗಳನ್ನು ಓಪನ್ ಕೋರ್ಟಿನಲ್ಲಿ ನಡೆಸದೆ ವಕೀಲರ ಗೈರುಹಾಜರಿಯಲ್ಲಿ (ಛೇಂಬರ್ ಇಸ್ಯೂ) ನ್ಯಾಯಾಧೀಶರ ಸಭಾ ಮಂದಿರದಲ್ಲಿ ಪ್ರಕಟ ಮಾಡುವ ತೀರ್ಪಿನ ಪದ್ಧತಿಯು ಎಷ್ಟು ಸಮಂಜಸ?

ಭೂಸ್ವಾಧೀನ ಪ್ರಕ್ರಿಯೆಗಳಲ್ಲಿ ನಮೂದಿಸಿರುವ ಸಂಸತ್ತಿನ ಕಾನೂನುಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಂಡು ತೀರ್ಪುಗಳನ್ನು ಕೊಟ್ಟರೆ ಪರಿಶಿಷ್ಟ ಜಾತಿ. ಪರಿಶಿಷ್ಟ ಪಂಗಡ ಇತ್ಯಾದಿ ವರ್ಗದವರ ಸಾಗುವಳಿ ಮಾಡುವ ಜಮೀನುಗಳಿಗೆ ಸಂಬಂಧಿಸಿದ ತೀರ್ಪುಗಳಲ್ಲಿ ಆಗಿರುವ ದೋಷಗಳನ್ನು ಸರಿಪಡಿಸಬಹುದು.

ದಿನೇ ದಿನೇ ನ್ಯಾಯಾಂಗದ ತೀರ್ಪುಗಳಲ್ಲಿ ಜನರು ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ. ಕಾನೂನುಗಳ ಅರಿವೇ ಇಲ್ಲದೆ ಅಶ್ವತ್ಥ ಕಟ್ಟೆಯ ಮೇಲೆ ಕುಳಿತುಕೊಂಡು ಪಂಚಾಯತ್‌ದಾರರು ಕೊಡುವ ತೀರ್ಪುಗಳು ಕೋರ್ಟಿನ ತೀರ್ಪುಗಳಿಗಿಂತ ಹೆಚ್ಚು ವಾಸ್ತವವಾಗಿರುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿ ಆರ್ಥಿಕ ಬಲ ಇಲ್ಲದವರು. ಮೋಸವು ನಡೆದು ಹೋದ ಮೇಲೆ ಅದನ್ನು ಕಂಡುಕೊಂಡವರು ಕೋರ್ಟಿಗೆ ಹೋಗುತ್ತಾರೆ. ಅವರು ಶ್ರಮಪಟ್ಟು ಸಂಪಾದಿಸಿದ ಹಣವನ್ನು ಅವರ ಸುಖಕ್ಕೆ ಬಳಸಬೇಕೇ ವಿನಾ ಕೋರ್ಟಿಗೆ ಬಂದು ಅದನ್ನು ವ್ಯಯ ಮಾಡಬಾರದು. ನ್ಯಾಯಾಂಗದಲ್ಲಿ ಶೀಘ್ರವಾಗಿ ಸುಧಾರಣೆಗಳಾಗಿ ನಮ್ಮ ಸಮಾಜದ ಜನರಿಗೆ ಆರೋಗ್ಯ, ಕಾಲ ಮತ್ತು ನೆಮ್ಮದಿಗಳು ಲಭಿಸುವಂತಾಗಲೆಂದು ಆಶಿಸೋಣ. ಈ ದೆಸೆಯಲ್ಲಿ ವಕೀಲರಾಗಿ ನಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡೋಣ.



ಎನ್.ಜೆ. ಶ್ರೀಹರ್ಷ

## ಸಾಧನೆ

ವಕೀಲ, ಎನ್.ಎಸ್. ಜಯಸಿಂಹರ ಪುತ್ರ ಎನ್.ಜೆ. ಶ್ರೀಹರ್ಷ ಈ ವರ್ಷದ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ವಿಶ್ವಕಲಾ ನಿಕೇತನ ಶಾಲೆಯಿಂದ ೫೨೭ ಅಂಕಗಳೊಂದಿಗೆ (೮೪.೩೨%) ತೇರ್ಗಡೆ ಯಾಗಿದ್ದಾನೆಂದು ತಿಳಿಸಲು 'ಸಂವಾದ' ಹರ್ಷಿಸುತ್ತದೆ. ಶ್ರೀಹರ್ಷನಿಗೆ ಅಭಿನಂದನೆಗಳು.

ಪ್ರಕಾಶಕರು : ಎಸ್. ಎನ್. ಪ್ರಶಾಂತಚಂದ್ರ, ಲಹರಿ ವಕೀಲರ ವೇದಿಕೆ, ನಂ. ೨೯೮೦, 'ಲಕ್ಷ್ಮೀದೀಪ', ೧೭ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು–೫೬೦ ೦೭೦
ಮುದ್ರಣ : ವೀ ಕೇ ಪ್ರಿಂಟರ್ಸ್ & ಪಬ್ಲಿಷರ್ಸ್, ನಂ. ೩೯೬, ಊಳಿಗಾ ಕಾಂಪ್ಲೆಕ್ಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦ ೦೦೩ ಸಂಪರ್ಕಿಸಿ : aravindneglur@gmail.com
KARBIL 01707 / 10 / 1 / 2009-TC